# ಸ್ವಯಂಸೇವಾ ಸಂಸ್ಥೆಗಳು ಮುಂಬಂದರೆ ಸರಕಾರಿ ಶಾಲೆಗಳು ಸಬಲವಾಗಿ ಸಮುದಾಯ ಆಕರ್ಷಿಸುವಂತಾಗುವುದರಲ್ಲಿ ಸಂದೇಹವಿಲ್ಲ

**ಪುಷ್ಪಾ, ಶಾಲಾ ಮುಖ್ಯಶಿಕ್ಷಕಿ**
**ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ನಾಗಪಟ್ಟಣ**

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ನಾಗಪಟ್ಟಣ ಈ ಶಾಲೆಯು ಸುಳ್ಯ ತಾಲೂಕು ಕೇಂದ್ರದಿಂದ ಸುಮಾರು 4 ಕಿ.ಲೊ ಮೀಟರ್ ಅಂತರದಲ್ಲಿ ಪಯಸ್ವಿನಿ ನದಿ ದಂಡೆಯ ಮೇಲೆ ನೆಲೆಸಿದೆ. ನಮ್ಮ ಶಾಲೆಯ ಎದುರಿನ ರಸ್ತೆಯೂ ಅಂತರ್ ಜಿಲ್ಲೆ ಹಾಗೂ ಅಂತರ್ ರಾಜ್ಯವನ್ನು ಸಂಪರ್ಕಿಸುವ ರಸ್ತೆಯಾಗಿದೆ.

ನಮ್ಮ ಶಾಲೆಯಲ್ಲಿ 1 ರಿಂದ 5ನೇ ತರಗತಿಯವರೆಗೆ ತರಗತಿಗಳಿದ್ದು ಒಟ್ಟು 23 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳು ಪ್ರತಿಭಾವಂತಾರಾಗಿದ್ದು ಕ್ಲಸ್ಟರ್ ಮಟ್ಟದಲ್ಲಿ ಹಲವಾರು ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ ಹಾಗೂ ಹಲವಾರು ವಿದ್ಯಾರ್ಥಿಗಳು ಮೊರಾರ್ಜಿ ದೇಸಾಯಿ ಪ್ರವೇಶ ಪರೀಕ್ಷೆ ಬರೆದು ಆಯ್ಕೆಯಾಗಿರುತ್ತಾರೆ. ಈ ಶೈಕ್ಷಣಿಕ ವರ್ಷದಲ್ಲಿ ದೇಷ್ಣಾ ಎ. (5ನೇ ತರಗತಿ) ಇವಳು ನವೋದಯ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿ ಶಾಲೆಗೆ ಕೀರ್ತಿಯನ್ನು ತಂದಿರುತ್ತಾಳೆ.

'ಪಡಿ' ಸಂಸ್ಥೆಯೂ ಕಳೆದ ಮೂರು ವರ್ಷಗಳಿಂದ ಮಗುಸ್ನೇಹಿ ಶಾಲಾ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಆಲೆಟ್ಟಿ ಕ್ಲಸ್ಟರ್‌ಗೆ ಒಳಪಟ್ಟು ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಾ ಬಂದಿರುತ್ತದೆ. ಅಂತೆಯೇ ಈ ಸಂಸ್ಥೆಯು ನಮ್ಮ ಶಾಲೆಗೂ ಭೇಟಿ ನೀಡಿ ಶಾಲೆಯ ಅಭಿವೃದ್ಧಿಯನ್ನು ಗಮನಿಸಿವೆ. ಎಸ್.ಡಿ.ಎಂ.ಸಿಯವರು ಸಭೆಯಲ್ಲಿ ಸದಸ್ಯರು ಹೆಚ್ಚಾಗಿ ಭಾಗವಹಿಸದೇ ಇರುವುದನ್ನು ಗಮನಿಸಿ ಮುಂದೆ ಎಸ್.ಡಿ.ಎಂ.ಸಿ ಯವರಿಗೆ ಹಲವಾರು ತರಬೇತಿಗಳನ್ನು ಹಾಗೂ ಮಾರ್ಗದರ್ಶನಗಳನ್ನು ನೀಡುತ್ತಾ ಬಂದಿದೆ. ಜೊತೆಗೆ ಶಾಲೆಗೆ ನಿರಂತರ ಭೇಟಿ ನೀಡಿ ಮಕ್ಕಳಿಗೂ ಹಲವಾರು ರೀತಿಯಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಶಾಲೆಯಿಂದ ಹೊರಗುಳಿದ ಮಕ್ಕಳ ಮನೆ ಭೇಟಿಯಲ್ಲಿ ನಮ್ಮೊಂದಿಗೆ ತೊಡಗುತ್ತಿದ್ದರು. 'ಪಡಿ' ಸಂಸ್ಥೆಯು ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣೆಗೆ ಸಂಬಂಧಿಸಿದ ರಂಗ ತರಬೇತಿಯಗಳನ್ನು ಮಕ್ಕಳಿಗೆ ನೀಡಿ ಸಮುದಾಯಕ್ಕೆ ಬೀದಿ ನಾಟಕ, ರೂಪಕಗಳ ಮೂಲಕ ಮಗುಸ್ನೇಹಿ ಸಮುದಾಯ, ಮಗುಸ್ನೇಹಿ ಪಂಚಾಯತ್, ಮಗುಸ್ನೇಹಿ ಶಾಲೆಗಳ ಅರಿವನ್ನು ಮೂಡಿಸಿರುತ್ತಾರೆ. ಮಕ್ಕಳ ಕಲಿಕೆಗೆ ಪೂರಕವಾದ ಕಲಿಕಾ ಸಾಮಗ್ರಿಗಳನ್ನು ಈ ಸಂಸ್ಥೆಯವರು ಸ್ಥಳೀಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ

ಸಹಕಾರದೊಂದಿಗೆ ನೀಡಿರುತ್ತಾರೆ. ಪ್ರತಿ ತಿಂಗಳ ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಹಾಜರಾಗುತ್ತಿದ್ದರು, ಗಮನಿಸಿ, ಸಭೆ ನಡೆಸುವಲ್ಲಿ ಸೂಕ್ತ ಮಾರ್ಗದರ್ಶನಗಳನ್ನು ನೀಡಿರುತ್ತಾ ಬಂದಿದ್ದಾರೆ. ಅಲ್ಲದೆ ಶಿಕ್ಷಕರಿಗೆ ಮಕ್ಕಳ ರಕ್ಷಣಾ ಸಮಿತಿ ರಚನೆಯ ಚೌಕಟ್ಟಿನೊಳಗೆ ಏನೇನು ಇರಬೇಕು ಎನ್ನುವುದರ ಬಗ್ಗೆ ತರಬೇತಿಯನ್ನು ನೀಡಿ ನಮ್ಮ ಶಾಲೆಯಲ್ಲಿ ಮಕ್ಕಳ ರಕ್ಷಣಾ ಸಮಿತಿ ರಚನೆಯಲ್ಲಿ ಉತ್ತಮ ಸಹಕಾರವನ್ನು ನೀಡಿರುತ್ತಾರೆ.

ಇಂತಹ ಸಂಸ್ಥೆಗಳು ನಮ್ಮ ಸರಕಾರಿ ಶಾಲೆಗಳ ಜೊತೆ ಕೈಜೋಡಿಸಿದರೆ ಸರಕಾರಿ ಶಾಲೆಗಳು ಇನ್ನೂ ಅಭಿವೃದ್ದಿ ಹೊಂದುದರ ಜೊತೆ 90% ರಷ್ಟು ಮಕ್ಕಳು ಸರಕಾರಿ ಶಾಲೆಯಲ್ಲಿ ಇರಲು ಸಾದ್ಯವಾಗಬಹುದು ಎಂಬುದನ್ನು ಹೇಳಲು ನಾನು ಇಷ್ಟಪಡುತ್ತೇನೆ.

ಪಡಿ ಸಂಸ್ಥೆಗೆ ಧನ್ಯವಾದಗಳು.

*****

## ಮಕ್ಕಳ ಹೆಜ್ಜೆ – ಸುಳ್ಯ ಮಕ್ಕಳ ಹಕ್ಕುಗಳ ರಂಗ ತಂಡ

ಮಗು ತಾನು ಹೆಜ್ಜೆ ಇಡಲು ಪ್ರಾರಂಬಿಸಿತು ಎಂದರೇ ಆ ಮಗುವಿಗೆ ಆಗುವ ಸಂತೋಷಕ್ಕೆ ಪಾರವೇ ಇರುವುದಿಲ್ಲ. ಅದೇ ತರಹ ಸುಳ್ಯ ತಾಲೂಕಿನ ಅರೆಟ್ಟಿ ವ್ಯಾಪ್ತಿಯ ಹಳ್ಳಿಯ ಮೂಲೆ ಮೂಲೆಗಳಲ್ಲಿ ಇರುವ ಶಾಲೆಗಳಲ್ಲಿ ಓದುತ್ತಿದ್ದ ನಮಗೆ ಮಕ್ಕಳ ಹಕ್ಕುಗಳು, ಬಾಲ ಕಾರ್ಮಿಕತೆ, ಬಾಲ್ಯ ವಿವಾಹ ಇಂತಹ ವಿಷಯಗಳ ಬಗ್ಗೆ ಹೆಚ್ಚಾಗಿ ಏನು ಗೊತ್ತಿರಲಿಲ್ಲ. ಶಾಲೆಯ ಪುಸ್ತಕಗಳು, ಓದು ಅಲ್ಪ ಸಮಯ ಆಟ ಇದರಲ್ಲಿಯೇ ದಿನನಿತ್ಯ ಚಟುವಟಿಕೆಗಳು ನಡೆಯುತ್ತಿದ್ದವು.

ಆ ಹೊತ್ತಿಗೆ ನಮ್ಮ ಶಾಲೆಗೆ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿಯನ್ನು ನೀಡಿ ನಮ್ಮನ್ನು ನಾಟಕ ತಂಡದಲ್ಲಿ ಭಾಗವಹಿಸಲು ಕೇಳಿಕೊಂಡಾಗ ಏನಿರಬಹುದು ಎಂದು ಯೋಚಿಸುತ್ತಾ ಒಪ್ಪಿಕೊಂಡು ರಂಗ ತರಬೇತಿಯಲ್ಲಿ ಭಾಗವಹಿಸಿದೆವು. ಒಬ್ಬರು ಸಂಪನ್ಮೂಲ ವ್ಯಕ್ತಿ ತರಬೇತಿಯನ್ನು ನೀಡುತ್ತಿದ್ದರು. ಕೆಲವರು ನಮ್ಮ ತರಬೇತಿಯನ್ನು ವೀಕ್ಷಿಸುತ್ತಿದ್ದರು. ಇದನ್ನೆಲ್ಲಾ ಅಲೋಚಿಸಿದವರು ಯಾರು ಎಂದು ನಿಮಗೆ ಕುತೂಹಲವಾಗಿರಬಹುದು ಅಲ್ಲವೆ. ಈ ಒಂದು ನಾಟಕ ತಂಡವನ್ನು ಅಯೋಜಿಸಿ ತರಬೇತಿ ನೀಡುತ್ತಿದ್ದವರೂ ಬೇರಾರು ಅಲ್ಲ ನಮ್ಮ 'ಪಡಿ ಸಂಸ್ಥೆ'.

ಮಕ್ಕಳ ರಕ್ಷಣೆ, ಪೋಷಣೆ, ಮಕ್ಕಳ ಹಕ್ಕುಗಳು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು, ಮಗುಸ್ನೇಹಿ ವಾತಾವರಣ ಶಾಲೆಯಲ್ಲಿ ಇರುವಂತಾಗಬೇಕು ಎನ್ನುವ

ಇನ್ನೂ ಹಲವಾರು ವಿಷಯಗಳನ್ನು ಇಟ್ಟುಕೊಂಡು ಸ್ಥಳೀಯ ಶಿಕ್ಷಣ ಸಂಪನ್ಮೂಲ ಕೇಂದ್ರದವರ ಜೊತೆ ಸೇರಿಕೊಂಡು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಿದರು.

ಪಡಿ ಸಂಸ್ಥೆ ಮೂಲಕ ನೀಡುವ ತರಬೇತಿ ನಮಗೆ ತುಂಬಾ ಸ್ಫೂರ್ತಿದಾಯಕವಾಗಿತ್ತು. ಮತ್ತು ನಮ್ಮ ಭವಿಷ್ಯಕ್ಕೆ ಪೂರಕವಾಗಿತ್ತು. ಇಪ್ಪತ್ತನಾಲ್ಕು ಮಂದಿ ಮಕ್ಕಳ ಒಂದು ತಂಡವನ್ನು ರಚಿಸಿ ಈ ತಂಡಕ್ಕೆ ತರಬೇತಿಯನ್ನು ನೀಡುತ್ತಿದ್ದರು. ಈ ತರಬೇತಿಯಿಂದ ನಮಗೆ ಬಾಲ ಕಾರ್ಮಿಕತೆ, ಬಾಲ್ಯವಿವಾಹ, ಮಕ್ಕಳ ಹಕ್ಕುಗಳು ಇವುಗಳಲ್ಲಿ ಸಮುದಾಯದ ಪಾತ್ರ, ಗ್ರಾಮ ಪಂಚಾಯತ್ ಮತ್ತು ಶಿಕ್ಷಣಕ್ಕೆ ಇರುವ ಸಂಬಂಧ, ಗ್ರಾಮದ ಮಕ್ಕಳೆಡೆ ಜನಪ್ರತಿನಿಧಿಗಳ ಜವಾಬ್ದಾರಿಗಳು ಈ ವಿಷಯವಾಗಿ ಉತ್ತಮವಾಗಿ ತರಬೇತಿ ಪಡಕೊಂಡು ನಮ್ಮ ನುರಿತ ತಂಡ ಸಮುದಾಯದ ಅನೇಕ ಕಾರ್ಯಕ್ರಮಗಳಲ್ಲಿ, ಶಾಲೆಗಳಲ್ಲಿ, ಗ್ರಾಮಸಭೆಗಳಲ್ಲಿ ಹೀಗೆ ಬೇರೆ ಬೇರೆ ಕಡೆಗಳಲ್ಲಿ ವಿಷಯವಾರು ಪ್ರದರ್ಶನವನ್ನು ನೀಡಿದೆವು. ಇದರಿಂದ ಸಮುದಾಯದ ಜನಕ್ಕೆ ಮಕ್ಕಳ ರಕ್ಷಣೆ ಹಕ್ಕುಗಳ ಬಗ್ಗೆ ಸರಕಾರಿ ಶಾಲೆಗಳನ್ನು ಉಳಿಸಿ ಬೆಳಸಿ ನಮ್ಮೂರ ಶಾಲೆಯನ್ನು ಮಗುಸ್ನೇಹಿಯಾಗಿ ಹೇಗೆ ಮಾಡಬಹುದು ಅನ್ನುವುದನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವಂತಾದರು.

ನಾಟಕ ತಂಡವು ಊರಲ್ಲಿನ ಬಾಲಕಾರ್ಮಿಕತೆಗೆ ಒಳಗಾದ ಮಕ್ಕಳನ್ನು ಗುರುತಿಸಿ ಮಾಹಿತಿಯನ್ನು ಇಲಾಖೆ ನೀಡುವಲ್ಲಿ ಸಶಕ್ತರಾದರು. ತಮ್ಮ ಶಾಲೆಗಳಲ್ಲಿ, ಸಮುದಾಯಗಳಲ್ಲಿ ತಂಡದ ಮಕ್ಕಳೇ ಮನೆ ಮನೆಗಳಲ್ಲಿ ಮಕ್ಕಳ ಹಕ್ಕುಗಳು ಮತ್ತು ಪೋಷಣೆ ಹಾಗೂ ರಕ್ಷಣೆ ಬಗ್ಗೆ ತಿಳಿಸಿ ಮಗುಸ್ನೇಹಿ ಸಮುದಾಯದ ಅಗತ್ಯತೆಯನ್ನು ತಿಳಿಸಿರುತ್ತಾರೆ.

ಪಡಿಸಂಸ್ಥೆಯು ಮಕ್ಕಳಾದ ನಮಗೆ ಈ ಹೊಸತಾದ ವಿಚಾರಗಳನ್ನು ತಿಳಿಸಿ, ಮುಖ್ಯವಾಗಿ ನಮ್ಮ ಶಾಲೆಯ ಎಸ್‌ಡಿಎಂಸಿಯವರ ತೊಡಗಿಸಿಕೊಳ್ಳುವಿಕೆ, ಪಂಚಾಯತ್‌ಗಳಲ್ಲಿ ಮಕ್ಕಳ ಪಾತ್ರ, ಮಕ್ಕಳ ಮಂತ್ರಿಮಂಡಲಗಳು. ಮೀನಾ ತಂಡ ಇವುಗಳಲ್ಲಿ ನಮ್ಮ ಪಾತ್ರಗಳು, ಮಕ್ಕಳ ಹಕ್ಕುಗಳ ಕ್ಲಬ್‌ಗಳು, ಸಲಹಾ ಪಟ್ಟಿಗೆಯ ನಿರ್ವಹಣೆಯ ಮಹತ್ವ ಹೀಗೆ ಶಾಲೆಯೊಳಗೆ ಇರಬೇಕಾದ ಮಗುಸ್ನೇಹಿ ವಾತಾವರಣದ ಬಗೆಗೂ 3 ವರ್ಷಗಳ ಕಾಲ ಶಿಕ್ಷಕರು ಹಾಗೂ ಎಸ್‌ಡಿಎಂಸಿಯವರೊಂದಿಗೂ ಸಮಾಲೋಚನೆಗಳು ಮಾಹಿತಿ ಸಭೆಗಳನ್ನು ನಡೆಸಿ ನಮ್ಮೊಂದಿಗಿದ್ದು ಬದಲಾವಣೆಯನ್ನು ತರುವಲ್ಲಿ ಮಾರ್ಗದರ್ಶನವನ್ನಿತ್ತಿದ್ದಾರೆ.

ಇಂದು ನಮ್ಮ ಗ್ರಾಮ ಪಂಚಾಯತ್‌ಗಳಲ್ಲಿ ಮಕ್ಕಳ ಧನಿಗೆ ವಿಶೇಷವಾದ ಆದ್ಯತೆ ನೀಡುತ್ತಿದ್ದು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಗ್ರಾಮ ಪಂಚಾಯತ್ ಸ್ಪಂದಿಸುವಂತಾಗಿದೆ. ಸಮುದಾಯದಲ್ಲಿ ಯಾವುದೇ ಭಯವಿಲ್ಲದೆ ಚಿಕ್ಕ ಮಕ್ಕಳೇ ನಾವು ಮುಂದೆ ಬಂದು ನಾಟಕಗಳನ್ನು ಸಮುದಾಯಕ್ಕೆ ನೀಡುವಂತಾಗಿದೆ ಮತ್ತು ಈ ಮೂಲಕ ಜನಪ್ರತಿನಿಧಿಗಳನ್ನು ಎಚ್ಚರಿಸಿ ಅವರ ಜವಾಬ್ದಾರಿಗಳನ್ನು ತಿಳಿ ಹೇಳುವಂತಾಗಿದೆ.

ಈಗ **ಮಕ್ಕಳ ಹೆಜ್ಜೆ** ತಂಡ ಸದೃಢವಾಗಿ ಮಕ್ಕಳ ಹಕ್ಕು ಮತ್ತು ರಕ್ಷಣೆ ಬಗ್ಗೆ ಇಡಿ ಸಮುದಾಯಕ್ಕೆ ರಂಗಕಲೆಯ ಮೂಲಕ ಅರಿವು ಮೂಡಿಸುತ್ತಿದೆ. ಇನ್ನೂ ಮುಂದೆ ನಮ್ಮ ಗ್ರಾಮದ ಪುಟ್ಟ ಮಕ್ಕಳಿಗೆ ನಾವೇ ತರಬೇತಿ ನೀಡುತ್ತಾ ಇದೇ ರೀತಿ ಅವರೂ ಸಮುದಾಯದ ಜತೆ ಸೇರಿ ನಮ್ಮೂರ ಸರಕಾರಿ ಶಾಲೆ. ಜನಪ್ರತಿನಿಧಿಗಳು ಹಾಗೂ ಗ್ರಾಮ ಪಂಚಾಯತ್ ಮಕ್ಕಳ ಸ್ನೇಹಿಯಾಗಿದ್ದು ಮಗುಸ್ನೇಹಿ ಸಮುಯದಾಯವನ್ನು ನಿರಂತರ ಕಾಣುವಂತೆ ಮಾಡುತ್ತೇವೆ ಎಂಬುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ.

**ಮಕ್ಕಳ ಹೆಜ್ಜೆ** ತಂಡ ಪಡಿ ಸಂಸ್ಥೆಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ.

*****

## ಶಾಲೆಯ ಆಸ್ತಿ ಶಾಲೆಗೆ ದೊರಕಿತು

ಮಕ್ಕಳು ಆನಂದದಾಯಕವಾಗಿ ಕಲಿಯಬೇಕಾದರೆ ಒಂದು ಶಾಲೆಯಲ್ಲಿ ಮೂಲಭೂತ ಸೌಕರ್ಯವೂ ಅಗತ್ಯವಿದೆ. ಪ್ರತೀ ಮಗುವಿನ ಭವಿಷ್ಯದ ಅಡಿಗಲ್ಲು ಪ್ರಾಥಮಿಕ ಶಾಲೆ ಹೀಗಿರುವಾಗ ಅಲ್ಲಿ ಮಕ್ಕಳಿಗೆ ಕಲಿಕೆಗೆ ಪೂರಕ ವಾತಾವರಣವಿರಬೇಕು ಎಂಬುದು ಎಲ್ಲರ ಆಶಯ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುರ ಇಲ್ಲಿ ಸುಮಾರು 100 ಮಕ್ಕಳು ಓದುತ್ತಿದ್ದಾರೆ. ಇಲ್ಲಿ ಎಲ್ಲಾ ಸಮುದಾಯದ



ಮಕ್ಕಳು ಪ್ರತೀ ದಿನ ಶಾಲೆಗೆ ಬರುತ್ತಿದ್ದಾರೆ ಹಾಗೂ ಇಲ್ಲಿನ ಮಕ್ಕಳ ಹೆಚ್ಚಿನ

ಪೋಷಕರು ಬಡ ಕೂಲಿ ಕಾರ್ಮಿಕರಾಗಿದ್ದಾರೆ. ಪಡಿ ಸಂಸ್ಥೆಯು ಮಗುಸ್ನೇಹಿ ಯೋಜನೆಯಡಿಯಲ್ಲಿ ಈ ಶಾಲೆಯನ್ನು ಆಯ್ಕೆ ಮಾಡಿಕೊಂಡು ಶಾಲಾ ಸ್ಥಿತಿ-ಗತಿಗಳನ್ನು ಅಧ್ಯಯನ ನಡೆಸಿದಾಗ ಶಾಲೆಗೆ ಆವರಣ ಗೋಡೆ ನಿರ್ಮಿಸಲು ಇರುವ ಅಡ್ಡಿ ಹಾಗೂ ಶಾಲೆಯ ಜಾಗಕ್ಕೆ ರೆಕಾರ್ಡ್ ಇಲ್ಲದಿರುವುದು ಗಮನಕ್ಕೆ ಬಂತು.

ಪಡಿಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಜೊತೆ ಸೇರಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ ಅವರ ಜವಾಬ್ದಾರಿ ಪಾತ್ರದ ಕುರಿತು ತರಬೇತಿ. 2. ಶಾಲಾಭಿವೃದ್ಧಿ ಯೋಜನೆ ಕುರಿತು ತರಬೇತಿ. 3. ಶಾಲಾಭಿವೃದ್ಧಿ ಯೋಜನೆಯನ್ನು ವಿವಿಧ ಇಲಾಖೆಗಳು ಮತ್ತು ದಾನಿಗಳಿಗೆ ನೀಡಿರುವುದು. ನಿರಂತರ ಅನುಸರಣೆ, ಕುಂದು-ಕೊರತೆ ನಿವಾರಣಾ ವ್ಯವಸ್ಥೆಗಳು ಮೊದಲಾದ ಕುರಿತು ತರಬೇತಿಗಳನ್ನು ಹಮ್ಮಿಕೊಂಡು ಆ ಮೂಲಕ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರನ್ನು ಬಲವರ್ಧನೆಗೊಳಿಸಲಾಯಿತು.

ನಂತರದ ದಿನಗಳಲ್ಲಿ ಶಾಲಾಭಿವೃದ್ಧಿ ಯೋಜನೆ ರಚಿಸುವ ಕುರಿತು ಪೋಷಕರು, ಸಮಿತಿ ಸದಸ್ಯರು ಯೋಚಿಸಿ ಶಾಲಾಭಿವೃದ್ಧಿ ಯೋಜನೆ ರಚಿಸಿದರು. ಇದರಲ್ಲಿ ಮುಖ್ಯವಾಗಿ ಶಾಲಾ ಜಾಗದ ಅಳತೆ ಮಾಡಿಸಿ ರೆಕಾರ್ಡ್ ಮಾಡುವ ಕುರಿತು ಯೋಜನೆಯಲ್ಲಿ ಹಾಕಲಾಯಿತು. ಶಾಲಾಭಿವೃದ್ಧಿ ಯೋಜನೆ ರಚಿಸಿ ಇಲಾಖೆ, ಪಂಚಾಯತ್ ಹಾಗೂ ಜನಪ್ರತಿನಿಧಿಗಳಿಗೆ ಸಲ್ಲಿಸಲಾಯಿತು. ನಂತರ ಇದನ್ನು ಪಡಿ ಸಂಸ್ಥೆಯ ಮಾರ್ಗದರ್ಶನದಲ್ಲಿ ಪಂಚಾಯತ್ ಹಾಗೂ



ಇಲಾಖೆಗಳಲ್ಲಿ ನಿರಂತರ ಶಾಲಾಭಿವೃದ್ಧಿ ಸಮಿತಿ ಸದಸ್ಯರು ಅನುಸರಣೆ ಮಾಡಿದರು. ಹಾಗೂ ಗ್ರಾಮ ಪಂಚಾಯತ್ ಉಪಾಧ್ಯಕ್ಷರ ಮೂಲಕ ಕಂದಾಯ ಇಲಾಖೆಯ ಅಧಿಕಾರಿಗಳ ಜೊತೆ ನಿರಂತರ ಮಾತುಕತೆ ನಡೆಸಿದ ಮೂಲಕ ಜಾಗದ ಅಳತೆಯನ್ನು ಮಾಡಿ ಶಾಲಾ ನಕ್ಷೆಯನ್ನು ತಯಾರಿಸಲಾಯಿತು. ನಂತರ ಇದರ ಫಲವಾಗಿ ಶಾಲಾ ಜಾಗದ ದಾಖಲೆ ಸಿದ್ಧವಾಯಿತು.

ಇದೀಗ ಶಾಲಾ ಮಕ್ಕಳ ಸುರಕ್ಷತೆಗೆ ಬೇಕಾದ ಆವರಣ ಗೋಡೆ ನಿರ್ಮಿಸಲು ಇದ್ದ ತಡೆ ತೆರವಾಗಿ ಮುಂದಿನ ದಿನಗಳಲ್ಲಿ ಶಾಲೆಗೆ ಪಂಚಾಯತ್ ಮೂಲಕ ಆವರಣ ಗೋಡೆ ನಿರ್ಮಿಸಲು ಅನುದಾನ ದೊರೆಯಲಿದೆ.

ಹೀಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಒಟ್ಟಾಗಿ ಕೆಲಸ ಮಾಡಿದರೆ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದನ್ನು ಮುರ ಶಾಲಾ ಎಸ್.ಡಿ.ಎಮ್.ಸಿ. ಮಾಡಿ ತೋರಿಸಿದೆ.

ಇದೀಗ ಶಾಲಾ ಮೂಲಭೂತ ಸೌಕರ್ಯದ ಅಭಿವೃದ್ಧಿಗಾಗಿ ಪೋಷಕರು, ಶಿಕ್ಷಕರು, ಎಸ್.ಡಿ.ಎಮ್.ಸಿ, ಸ್ಥಳೀಯ ಸರಕಾರ ಕೈ ಜೋಡಿಸಿ ಸಮುದಾಯದ ಭಾಗವಹಿಸುವಿಕೆಯನ್ನು ಖಾತ್ರಿಗೊಳಿಸಿ ಮಕ್ಕಳ ರಕ್ಷಣೆ ಮತ್ತು ಮಗುಸ್ನೇಹಿ ವಾತವರಣಕ್ಕಾಗಿ ಪೂರಕ ಯೋಜನೆಗಳನ್ನು ರೂಪಿಸಲು ದಿಟ್ಟ ಹೆಜ್ಜೆಯನ್ನಿಟ್ಟಿದೆ.

*****

## ಒಮ್ಮತವಿದ್ದರೆ ಎಲ್ಲವೂ ಸುಗಮ...

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಂಧಿನಗರ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಉಜಿರೆ ಕ್ಲಸ್ಟರ್ ವ್ಯಾಪ್ತಿಗೆ ಬರುವ ಶಾಲೆ. ಈ ಶಾಲೆಯಲ್ಲಿ ಒಂದರಿಂದ 5ನೇ ತರಗತಿಯವರೆಗೆ ಕಲಿಕೆಗೆ ಅವಕಾಶವಿದ್ದು, 36 ಮಕ್ಕಳು ಕಲಿಯುತ್ತಿದ್ದಾರೆ. ಇಬ್ಬರು ಶಿಕ್ಷಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಎಲ್ಲಾ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಇದ್ದರೂ ಈ ಶಾಲೆಯಲ್ಲಿ ಮಾತ್ರ ಮುಖ್ಯ ಶಿಕ್ಷಕಿ ಎಸ್.ಡಿ.ಎಂ.ಸಿ ಸದಸ್ಯರ ಸಂಬಂಧ ಅಷ್ಟಕ್ಕಷ್ಟೆ ಅನ್ನುವಂತಿತ್ತು. ಶಾಲೆಯ ಅಭಿವೃದ್ಧಿಗೆ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಹಿನ್ನಡೆ ಅನ್ನುವ ಭಾವನೆ ಮುಖ್ಯ ಶಿಕ್ಷಕಿಯವರಲ್ಲಿತ್ತು.

ಒಂದು ಶಾಲೆ ಅಭಿವೃದ್ಧಿ ಪಥದತ್ತ ಸಾಗಬೇಕಾದರೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರು ಹಾಗೂ ಶಿಕ್ಷಕ ವೃಂದ ಒಮ್ಮತದಿಂದ ಹೋಗಲೇಬೇಕು. ಈ ಸಮಸ್ಯೆಯನ್ನು ಪಡಿ ಸಂಸ್ಥೆಯು ಆರಂಭದಲ್ಲಿ ಮೂಲ ಮಾಹಿತಿ ಪಡಕೊಳ್ಳುವ ಸಂದರ್ಭದಲ್ಲೇ ಗ್ರಹಿಸಿತ್ತು. ಅಲ್ಲದೆ ಈ ಶಾಲೆಯಲ್ಲಿ ಯೋಜನೆಯ ಅನುಷ್ಠಾನವನ್ನು ಮಾಡುವ ಸಂದರ್ಭದಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಯಿತು.

ಯೋಜನೆಯ ಆರಂಭದಲ್ಲಿ ಅಂದರೆ, 2017–18ರ ಸಾಲಿನಲ್ಲಿ, ಎಸ್‌ಡಿಎಂಸಿ ಸಭೆಯಲ್ಲಿ ಪಡಿ ಸಂಸ್ಥೆಯ ತರಬೇತಿದಾರರು ಮತ್ತು ಮಾರ್ಗದರ್ಶಕರು ಭಾಗವಹಿಸಿ, ಎಸ್‌ಡಿಎಂಸಿ ಸಭೆ ನಡೆಸುವ ರೀತಿಯನ್ನು ಗಮನಿಸಲಾಯಿತು. ಅಧ್ಯಕ್ಷರು, ನಾಮನಿರ್ದೇಶಿತ ಪಂಚಾಯತ್ ಸದಸ್ಯರು ಮತ್ತು ಶಾಲಾ ಮುಖ್ಯ ಶಿಕ್ಷಕಿ ಮಾತ್ರ ಶಾಲಾಭಿವೃದ್ಧಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಉಳಿದ ಸದಸ್ಯರು ಯಾವುದೇ ವಿಷಯದ ಬಗ್ಗೆ ಮಾತನಾಡುತ್ತಿರಲಿಲ್ಲ. ಹೀಗೆ ಉದಾಹರಣೆಗೆ ಒಂದು ಸಭೆಯಲ್ಲಿ ಶಾಲಾ ಗೇಟಿನ ಸಮಸ್ಯೆಯ ಕುರಿತು ಶಾಲಾ ಶಿಕ್ಷಕಿ ಮತ್ತು ಎಸ್‌ಡಿಎಂಸಿ ಸದಸ್ಯರಿಗೆ ಮಾತುಕತೆ ನಡೆಯಿತು.

ನಂತರದ ತರಬೇತಿ ಹಂತದಲ್ಲಿ ಎಸ್‌ಡಿಎಂಸಿ ಸದಸ್ಯರಿಗೆ ಶಾಲಾಭಿವೃದ್ಧಿ ಸಮಿತಿ ಮತ್ತು ಕರ್ತವ್ಯ ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡಲಾಯಿತು. ಎಸ್‌ಡಿಎಂಸಿ ಸಭೆಯಲ್ಲಿ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

ಕ್ರಮೇಣ ಪಡಿ ಸಂಸ್ಥೆಯು 6 ತಿಂಗಳಿಗೊಮ್ಮೆ ನಡೆಸುವ ಶಾಲಾಭಿವೃದ್ಧಿ ಸಮಿತಿಯ ಮೌಲ್ಯಮಾಪನ ಸಮಯದಲ್ಲಿ ಎಲ್ಲಾ ಸದಸ್ಯರು ಶಾಲಾಭಿವೃದ್ಧಿ ಯೋಜನೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡಲಾಯಿತು.

ಈ ಸಭೆಯಲ್ಲಿ ಶಾಲಾ ಗೇಟಿನ ಸಮಸ್ಯೆ ಒಂದಾದರೆ ಶಾಲೆಯ ಇನ್ನಿತರ ಸಮಸ್ಯೆಯ ಬಗ್ಗೆ ಕೂಡ ಎಸ್‌ಡಿಎಂಸಿ ಸದಸ್ಯರು ಚರ್ಚಿಸಿದರು. ನಾಮನಿರ್ದೇಶಿತ ಪಂಚಾಯತ್ ಸದಸ್ಯರು ಈ ಗೇಟಿನ ಸಮಸ್ಯೆಯು ಚರ್ಚೆಯಾಗದೇ ಮಕ್ಕಳಿಗೆ ತೊಂದರೆ ಆಗದಂತೆ ಹಾದಿ ಸುಗಮವಾಗಿಸುವಲ್ಲಿ ತಮ್ಮ ಸಹಕಾರವನ್ನು ತಿಳಿಸುತ್ತಾ ಶಿಕ್ಷಕಿ ಮತ್ತು ಎಲ್ಲಾ ಸದಸ್ಯರು ಒಮ್ಮತಕ್ಕೆ ಬರುವಂತೆ ಪ್ರಯತ್ನಿಸಿದರು. ಅದರಂತೆ ಎಸ್‌ಡಿಎಂಸಿ, ಪೋಷಕರ ಅಭಿಪ್ರಾಯದಂತೆ ಯಾವ ಕಡೆಯಿಂದ ಗೇಟು ಮಾಡುವುದೆಂದು ನಿರ್ಧರಿಸಲಾಯಿತು. 2019ರ ಸಾಲಿನ ಜನವರಿ ತಿಂಗಳಲ್ಲಿ ಶಾಲೆಗೆ ಗೇಟು ಕೂಡ ನಿರ್ಮಾಣವಾಯಿತು.

*****

## ವಿವಿಧ ಕಲೆಗಳೊಂದಿಗೆ ಶಾಲೆಯ ಗೋಡೆಗೆ ಬಣ್ಣ

ಸುಳ್ಯ ತಾಲೂಕು ಕೇಂದ್ರದಿಂದ 12 ಕಿ.ಲೋ ದೂರದಲ್ಲಿರುವ ಕೋಲ್ಚಾರ್ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ. ನಮ್ಮ ಶಾಲೆ ಪಶ್ಚಿಮ ಘಟ್ಟ ಶ್ರೇಣಿಯಲ್ಲಿ ಕೇರಳದ ಗಡಿ ಪ್ರದೇಶದಲ್ಲಿರುವ ಶಾಲೆ ಕಾಡು ಬೆಟ್ಟಗಳಿಂದ ಆವೃತ್ತವಾಗಿದೆ. ಸಂಪರ್ಕ ರಸ್ತೆ ಇದ್ದರೂ ಸೀಮಿತ ವಾಹನ ವ್ಯವಸ್ಥೆಯಿಂದಾಗಿ ಪ್ರಯಾಣ ಕಷ್ಟ ಸಾಧ್ಯ. ನಮ್ಮ ಶಾಲಾ ಮಕ್ಕಳು ಬೆಟ್ಟಗುಡ್ಡಗಳನ್ನು ಏರಿಳಿದು ಶಾಲೆಗೆ ಬರುವುದು

ಅನಿವಾರ್ಯ. ಆಲೆಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇರುವ ಈ ಶಾಲೆ ಕಲಿಕೆಯಲ್ಲಿ ಸದಾ ಮುಂದಿದ್ದರೂ ಅಷ್ಟೊಂದು ಮೂಲಭೂತ ಸೌಕರ್ಯ ಇಲ್ಲದಿರುವುದು ಎದ್ದು ಕಾಣುತ್ತಿತ್ತು. ಉತ್ಸಾಹಿ ಶಿಕ್ಷಕ ವೃಂದ ಇದ್ದರು.

ಶಾಲೆ ಕಲಿಕೆಯೊಂದಿಗೆ ಕಲಿಕಾ ವಾತಾವರಣ ಹೊಂದಿರಬೇಕು ಇದಕ್ಕೆ ಮೂಲಭೂತ ಸೌಕರ್ಯಗಳು ಅತಿ ಅಗತ್ಯ ಎಂದು ತಿಳಿದುಕೊಂಡು ಪ್ರಥಮವಾಗಿ ಶಾಲೆಯ ಕೊಠಡಿ ಗೋಡೆಗಳಿಗೆ ಶ್ರೇಷ್ಠ ಜ್ಞಾನವಾಕ್ಯಗಳ ಧ್ಯೇಯವಾಕ್ಯಗಳನ್ನು ಬರೆಸುವುದು ಮತ್ತು ಗೋಡೆಗಳಲ್ಲಿ ವರ್ಣಚಿತ್ರಗಳನ್ನು ರಚಿಸುವ ಮೂಲಕ ಮಕ್ಕಳ ಮನಸ್ಸಿಗೆ ಮತ್ತು ನೋಡುವ ನೋಟಕ್ಕೆ ಹಿತವಾದ ವಾತಾವರಣ ಮತ್ತು ಆ ಚಿತ್ರವೂ ಸಂಬಂಧಿತ ವಿಚಾರಗಳನ್ನು ತಿಳಿಯಲು ಮನಸ್ಸಿಗೆ ಪ್ರೇರಣೆ ನೀಡುವಂತಾಗಬೇಕು ಎಂಬ ಆಶಯದೊಂದಿಗೆ ಎಸ್‌ಡಿಎಂಸಿ ಸಭೆಯನ್ನು ಕರೆಯುವುದರ ಮೂಲಕ ಶಾಲಾಭಿವೃದ್ಧಿ ಯೋಜನೆ ತಯಾರಿಸಿ, ಅದರೊಂದಿಗೆ ಕ್ರಿಯಾಯೋಜನೆಯನ್ನು ತಯಾರು ಮಾಡಿ ದಾನಿಗಳನ್ನು ಗುರುತಿಸುವುದರ ಮೂಲಕ ಕ್ರಿಯಾ ಯೋಜನೆಯ ಒಂದು ಪ್ರತಿಯನ್ನು "ಕನ್ನಡ ಮನಸ್ಸುಗಳು" ಎಂಬ ಒಂದು ತಂಡದವರನ್ನು ಗುರುತಿಸಿ ಅವರಲ್ಲಿ ಕೇಳಿಕೊಂಡಾಗ ಅವರು ನಮಗೆ ಕೈ ಜೋಡಿಸಿದರು. ಅವರ ನೆರವಿನೊಂದಿಗೆ ಇಂದು ನಮ್ಮ ಶಾಲಾ ಗೋಡೆಗಳಲ್ಲಿ ಯಕ್ಷಗಾನ ವರ್ಣಚಿತ್ರಗಳು, ಪ್ರಕೃತಿ ಚಿತ್ರಗಳು, ಪಕ್ಷಿಗಳು, ಪ್ರಾಣಿಗಳು ಜೊತೆಗೆ ಕಲಿಕಾ ಪೂರಕವಾಗುವ ಕೆಲವು ಮಾಹಿತಿ ಚಿತ್ರಗಳು, ಕವನಗಳು, ಸಾಹಿತಿಗಳು, ಮಗುಸ್ನೇಹಿ ವಾತಾವರಣ ಮೂಡಿಸುವಲ್ಲಿ ಇರಬೇಕಾದ, ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಚಿತ್ರಗಳೊಂದಿಗೆ ಗೋಡೆ ಬರಹಗಳನ್ನು ಚಿತ್ರಿಸಿ ವರ್ಣರಂಜಿತ ವಾತಾವರಣವಾಗಿ ಸೃಷ್ಟಿಸಲ್ಪಟ್ಟಿದೆ. ಮಗುವೊಂದು ಗೋಡೆಯನ್ನು ದಿಟ್ಟಿಸುತ್ತದೆ ಎಂದರೆ ಹೊಸ ವಿಷಯವೊಂದರ ಕುರಿತು ಕಲಿಯುತ್ತದೆ ಎನ್ನುವಂತಾಗಿದೆ. ನೂರು ಮಾತುಗಳಲ್ಲಿ ಹೇಳುವುದನ್ನು ಒಂದು ಚಿತ್ರದ ಮೂಲಕ ನೂರು ವಿಷಯಗಳನ್ನು ಮಗು ತಾನಾಗಿಯೇ ತಿಳಿದುಕೊಳ್ಳಲು ಸಾಧ್ಯ ಎಂದು ಎಸ್‌ಎಂಡಿಸಿ ತಿಳಿದುಕೊಂಡು ಈ ರೀತಿ ಗೋಡೆಗೆ ಬಣ್ಣದ ಚಿತ್ರಕಲೆಗಳನ್ನು ರಚಿಸುವಲ್ಲಿ ಇಡಿ ಊರಿಗೆ ಮಾದರಿ ಶಾಲೆಯಾಗಿ ಕಾಣುವಂತಾಗಿದೆ. ಇದನ್ನು ಕಂಡಂಥ ಪೋಷಕರು ಮತ್ತು ಸಮುದಾಯದವರು ಹಾಗೂ ಮಕ್ಕಳು ಎಸ್‌ಡಿಎಂಸಿ ಹಾಗೂ ಶಿಕ್ಷಕರ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತಾರೆ.

ಇಂತಹ ಯೋಚನೆಗಳಿಗೆ ಮಾರ್ಗದರ್ಶನ ನಮಗೆ ಸಿಕ್ಕಿರುವುದು 'ಪಡಿ' ಸಂಸ್ಥೆಯು ನಮಗೆ ನೀಡಿರುವ ತರಬೇತಿ ಮತ್ತು ಮಾರ್ಗದರ್ಶನ ಹೊಸ ಚಿಂತನೆಗಳನ್ನು ನಮಗೆ ನೀಡಿ ಪ್ರೋತ್ಸಾಹ ನೀಡಿ ಸದಾ ನಮ್ಮೊಂದಿಗೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ 'ಪಡಿ' ಸಂಸ್ಥೆ ಸಹಕರಿಸಿದೆ. ತಮ್ಮ ಸಮಯೋಚಿತ ಮಾರ್ಗದರ್ಶನಗಳು,

ತರಬೇತಿಗಳು, ಮಗುಸ್ನೇಹಿ ಶಾಲೆ ಮತ್ತು ಸಮುದಾಯದ ಪರಿಕಲ್ಪನೆಯ ಆಳದಲ್ಲಿ ನಮ್ಮನ್ನು ನಡೆಸುತ್ತಾ ನಮ್ಮ ಶಾಲೆಯ ಶೈಕ್ಷಣಿಕ ಪ್ರಗತಿಗೆ ಕಾರಣೀಭೂತರಾಗಿರುವ ತಮಗೆ ಧನ್ಯವಾದಗಳು ಎಂದು ಶಾಲಾ ಎಸ್‌ಎಂಡಿಸಿಯವರು ಮತ್ತು ಶಿಕ್ಷಕರು ಮುಕ್ತವಾಗಿ ಹೇಳುತ್ತಾರೆ.

*****

## ಉಡುಪಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರಕ್ಕೆ ಆಡಳಿತಾತ್ಮಕ ಸ್ವರೂಪ

ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರುವಲ್ಲಿ ಸಮುದಾಯದ ಅಭಿವೃದ್ಧಿ ಮತ್ತು ಪಾಲ್ಗೊಳ್ಳುವಿಕೆ ಪ್ರಮುಖ ಪಾತ್ರ ವಹಿಸುತ್ತದೆ, ಗುಣಮಟ್ಟದ ಶಿಕ್ಷಣದ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಪ್ರತೀ ಹಂತದಲ್ಲೂ ನಡೆದಾಗ ಒಟ್ಟು ಸಮುದಾಯವೇ ಜಾಗೃತಗೊಂಡು ಗುಣಮಟ್ಟದ ಶಿಕ್ಷಣದ ಬಗ್ಗೆ ಚಿಂತಿಸಿ ಕಾರ್ಯೋನ್ಮುಖರಾಗಲು ಸಾಧ್ಯ. ಈ ಅಗತ್ಯದ ಪರಿಸ್ಥಿತಿಯಲ್ಲಿ ಸುಮಾರು 25 ವರ್ಷಗಳ ಹಿಂದೆ ಶಿಕ್ಷಣ ತಜ್ಞ ಡಾ. ಡೆಸ್ಮಂಡ್ ಡಿ'ಅಬ್ರಿಯೋ ಅವರ ನೇತೃತ್ವದಲ್ಲಿ ಪ್ರಾರಂಭವಾದ ಪರಿಕಲ್ಪನೆಯೆ ವೆಲೊರೆಡ್ (ಮೌಲ್ಯಾಧರಿತ ಶಿಕ್ಷಣ). ಇದನ್ನರಿತ ಡಾ.ಡೆಸ್ಮಂಡ್ ಡಿ'ಅಬ್ರಿಯೋ ಮೊದಲಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ತರುವ ನಿಟ್ಟಿನಲ್ಲಿ ಸಮಾನ ಮನಸ್ಕರ ಗುಂಪು, ಪಾಠ ಪಠ್ಯಗಳಲ್ಲಿ ಬದಲಾವಣೆ ತರಲು ಚರ್ಚಿಸಲು ಪ್ರಾರಂಭಿಸಿದರು. ಮೊದಮೊದಲಿಗೆ ತಮ್ಮ ಸಭೆಗಳನ್ನು ಮರದ ಅಡಿ ಮತ್ತು ಶಾಲಾ ಜಗಲಿಯ ಮೇಲೆ ಮಾಡುತ್ತಿದ್ದರು.

ನಂತರದ ದಿನಗಳಲ್ಲಿ ಮೌಲ್ಯಾಧಾರಿತ ಶಿಕ್ಷಣ (ವೆಲೊರೆಡ್) ಯೋಜನೆಯು ಮೊದಲ ಬಾರಿ ಬೆಳ್ತಂಗಡಿಯಲ್ಲಿ ಸಮಾನ ಮನಸ್ಕರ ಗುಂಪನ್ನು ರಚಿಸಿ ಬೆಳೆಸಿ ಅಲ್ಲಿ ಸಭೆ ಸೇರಿದ ಸಂಪನ್ಮೂಲ ವ್ಯಕ್ತಿಗಳ ತಂಡವು ಸಮಿತಿಯಾಗಿ “ಶಿಕ್ಷಣ ಸಂಪನ್ಮೂಲ ಕೇಂದ್ರ”ವೆಂದು ನಾಮಕರಣಗೊಂಡಿತು. ಮುಂದಿನ ದಿನಗಳಲ್ಲಿ ಪಡಿ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಿಗೆ ಸಾಮರ್ಥ್ಯವರ್ಧನ ತರಬೇತಿ ನೀಡುವುದರ ಮೂಲಕ ಅವರಲ್ಲಿನ ನಾಯಕತ್ವ, ಮಾಹಿತಿಗಳ ಜ್ಞಾನವನ್ನು ವೃದ್ಧಿಸಿ ಸಮುದಾಯಧಾರಿತ ಸಂಘಟನೆಯಾಗಿ ಸಭೆಗಳನ್ನು ನಡೆಸುವುದರ ಬಗ್ಗೆ ಮತ್ತು ಕಾನೂನಿನ ಅನುಸರಣೆಯ ಅಂದರೆ ಸಮಿತಿ ರಚನೆ ಮತ್ತು ಸಭೆಯನ್ನು ಕರೆಯುವುದು, ಸದಸ್ಯರಿಗೆ ಪತ್ರ ಬರೆಯುವುದು, ಅಜೆಂಡಾದ ಕುರಿತು, ಸಭೆಯ ನಿರ್ಣಯಗಳನ್ನು ಬರೆಯುವ ಕುರಿತು, ಸಂಸ್ಥೆಯನ್ನು ನೊಂದಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಯಿತು. ಮುಂದುವರೆಯುತ್ತಾ ಮಂಗಳೂರು, ಸುಳ್ಯ, ಪುತ್ತೂರು, ಬಂಟ್ವಾಳ,

ಉಡುಪಿಯ ಹೆಜಮಾಡಿಯಲ್ಲಿ ಕೂಡಾ "ಶಿಕ್ಷಣ ಸಂಪನ್ಮೂಲ ಕೇಂದ್ರ"ಗಳೂ ಪ್ರಾರಂಭಗೊಂಡಿತು.

ಶಿಕ್ಷಣ ಸಂಪನ್ಮೂಲ ಕೇಂದ್ರವು ಉಡುಪಿಯ ಮೂರು ತಾಲೂಕುಗಳಿಗೆ ಮುಂದೆ ವಿಸ್ತಾರಗೊಂಡಿತು. ಆಯಾ ತಾಲೂಕುಗಳಲ್ಲಿ ಸದಸ್ಯರೆಲ್ಲರು ಸೇರಿ ಸಭೆ ನಡೆಸಲು ಪ್ರಾರಂಭಿಸಿದರು. ಸಭೆಯ ನಿರ್ಣಯಗಳನ್ನು ಕಾರ್ಯದರ್ಶಿ ಮಾಡುತ್ತಿದ್ದರು, ಹಾಗೆಯೇ ಲೆಕ್ಕಾಚಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಲೆಡ್ಜರ್ ಬುಕ್ ಮಾಡಿದರು, ಇದರ ಜವಾಬ್ದಾರಿಯನ್ನು ಖಜಾಂಚಿಯು ನಿರ್ವಹಿಸುತ್ತಿದ್ದರು, ಪ್ರತಿ ತಾಲೂಕುಗಳಲ್ಲಿ 12 ಜನರ ಕಾರ್ಯಕಾರಿ ಸಮಿತಿ ರಚನೆ ಮಾಡಿದರು, (ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜೊತೆ ಕಾರ್ಯದರ್ಶಿ, ಖಜಾಂಚಿ ಮತ್ತು ಸದಸ್ಯರು), ಹಣಕಾಸು ವ್ಯವಹಾರಗಳನ್ನು ಮಾಡಲು ಆಯಾ ತಾಲೂಕುಗಳಲ್ಲಿ ಸಂಸ್ಥೆಯ ಹೆಸರಿನಲ್ಲಿ ಖಾತೆಯನ್ನು ತೆರೆದರು. ನಂತರದ ದಿನಗಳಲ್ಲಿ ಜಿಲ್ಲಾ ಸಮಿತಿ ಪ್ರಾರಂಭ ಮಾಡಿದರು. ಅದಕ್ಕೆ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಎಂದು ನಾಮಕರಣ ಮಾಡಿದರು, ಎಲ್ಲಾ ಸದಸ್ಯರು ಕೂಡಿಕೊಂಡು ಚರ್ಚೆ ಮಾಡಿ 2007–2008ರ ಸುಮಾರು ಎರಡು ವರ್ಷಗಳ ಕಾಲ ಬೈಲಾ ಸಿದ್ದಪಡಿಸಲು ಅವಿರತ ಶ್ರಮ ವಹಿಸಿದರು ಮತ್ತು ಬೈಲಾವನ್ನು ಜಾರಿಗೆ ತಂದರು, ಆ ಬೈಲಾ ನಿಯಮದಂತೆ ಪ್ರತಿ ತಾಲೂಕಿನ ಮಹಾ ಸಭೆಯಲ್ಲಿ 4 ಮಂದಿ ಸದಸ್ಯರನ್ನು ಆಯ್ಕೆ ಮಾಡಿ ಜಿಲ್ಲೆಗೆ ಕಳುಹಿಸಿ, ಅಲ್ಲಿ ಪುನಹಃ ಜಿಲ್ಲಾ ಮಹಾ ಸಭೆಯನ್ನು ಕರೆದು ತಾಲೂಕಿನಿಂದ ಜಿಲ್ಲೆಗೆ ಆಯ್ಕೆಯಾಗಿ ಬಂದ ಸದಸ್ಯರನ್ನೊಳಗೊಂಡು ಜಿಲ್ಲಾ ಸಮಿತಿ ರಚನೆಗೊಂಡು, ಮೂರು ತಿಂಗಳಿಗೊಮ್ಮೆ ಸಭೆ ಮಾಡುತ್ತಿದ್ದರು. ತಾಲೂಕಿನಲ್ಲಿ ಆದ ಸಭೆಯ ನಿರ್ಣಯಗಳನ್ನು ಒಳಗೊಂಡ ವರದಿಯನ್ನು ಜಿಲ್ಲೆಗೆ ಕಳುಹಿಸಿ, ಜಿಲ್ಲಾ ಸಮಿತಿಯಲ್ಲಿ ಚರ್ಚೆ ಮಾಡುತ್ತಿದ್ದರು. ಮುಂದೆ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಪ್ರಾಥಮಿಕ ಶಿಕ್ಷಣದಲ್ಲಿ ಮೌಲ್ಯಾಧಾರಿತ ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಮುದಾಯದ ಸಹಭಾಗಿತ್ವದ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರವು, ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸರ್ವ ಸದಸ್ಯರ ಸಹಕಾರದಲ್ಲಿ ಮುನ್ನಡೆಯುತ್ತಿದೆ. ಸಮುದಾಯದ ಸಬಲೀಕರಣದೊಂದಿಗೆ ರಾಜ್ಯಮಟ್ಟದಲ್ಲಿ ಶೈಕ್ಷಣಿಕ ನೀತಿಗಳಲ್ಲಿ ಆಗಲೇಬೇಕಾದ ಗುಣಾತ್ಮಕ ಬದಲಾವಣೆಗಳ ಬಗ್ಗೆ ಹಾಗೂ ಮಕ್ಕಳ ಹಕ್ಕುಗಳ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ, ಜಿಲ್ಲೆ ಹಾಗೂ ಸ್ಥಳೀಯಾಡಳಿತದೊಂದಿಗೆ ಕಾರ್ಯಕ್ರಮಗಳನ್ನು ಮಾಡಿ ಸ್ವತಃ ಅವರೇ ವರದಿಗಳನ್ನು ಮಾಡುತ್ತಿದ್ದರು, ಪತ್ರಿಕಾ ಪ್ರಕಟಣೆ ಮಾಡುತ್ತಿದ್ದರು.

ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಮುಂದೆ ಕರ್ನಾಟಕ ರಾಜ್ಯ ಸೊಸೈಟಿ ನಿಯಮದಂತೆ ನೊಂದಣೆಗೊಂಡಿತು. ಮುಂದೆ ಸ್ವಂತ ಕಛೇರಿಯನ್ನು ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ.) ಉಡುಪಿ ಉದ್ಘಾಟನೆ ಮಾಡಿತು. ವರ್ಷಕ್ಕೊಮ್ಮೆ ತಮ್ಮ ಖರ್ಚುವೆಚ್ಚಗಳನ್ನು ಲೆಕ್ಕಪರಿಶೋಧನೆ ಮಾಡಿ ಮಹಾಸಭೆಯಲ್ಲಿ ಪ್ರಸ್ತಾಪಿಸುತ್ತ ಬಂದಿದೆ, ಇಂದು ಸಂಸ್ಥೆಯೂ ಕಾನೂನಿನ ಅನುಸರಣೆಗಳಾದ ಪಾನ್‌ಕಾರ್ಡ್ ಹೊಂದಿದ್ದು, 12ಎ ಮತ್ತು 80ಜಿ ಯನ್ನು ಆದಾಯ ತೆರಿಗೆ ಇಲಾಖೆಗೆ ನೀಡಲಾಗಿದೆ. ಸಂಸ್ಥೆಯು ಸ್ವಂತ ಲೈಬ್ರೆರಿ ಹೊಂದಿದ್ದು ಸುಮಾರು 500–1000 ಪುಸ್ತಕಗಳಿವೆ, ಸುಮಾರು 10–15 ಬೇರೆ ಬೇರೆ ವಿಷಯಗಳ ಕುರಿತು ತರಬೇತಿ ಕೈಪಿಡಿ ಹೊಂದಿದೆ.

ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರದ ಕಾರ್ಯಕಾರಿ ಸಮಿತಿಯ ಸದಸ್ಯರು ಘಟಕಗಳಿಗೆ ಭೇಟಿ ನೀಡಿ, ತಾಲೂಕು ಘಟಕಗಳ ಕಾರ್ಯವೈಖರಿಯನ್ನು ಗಮನಿಸುತ್ತಾ ಮಾರ್ಗದರ್ಶಿಸುತ್ತಾ ಅವರ ಕಾರ್ಯಗಳನ್ನು ಮೌಲ್ಯಮಾಪನ ಮಾಡಿ ವರದಿ ಮಾಡುತ್ತಿದ್ದಾರೆ. ಸಮಸ್ಯೆಗಳನ್ನು ಜಿಲ್ಲಾ ಸಮಿತಿಯಲ್ಲಿ ಬಗೆಹರಿಸುತ್ತಿದ್ದಾರೆ. ಬೈಲಾ ನಿಯಮದಂತೆ ಎರಡು ವರ್ಷಕ್ಕೊಮ್ಮೆ ಸಮಿತಿ ಬದಲಾವಣೆಗೊಳ್ಳುತ್ತದೆ. ಈಗ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಸ್ವತಂತ್ರವಾಗಿ ತನ್ನ ಕಾರ್ಯವೈಖರಿಯನ್ನು ನಿರ್ವಹಿಸುತ್ತಿದೆ.

ಇವೆಲ್ಲದಕ್ಕೂ ಬೆನ್ನೆಲುಬಾಗಿದ್ದುದು ಪಡಿ–ವೆಲೊರೆಡ್. ಸ್ವತಂತ್ರರಾಗಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ) ಉಡುಪಿ ಮುನ್ನಡೆಯಲು ಆರ್ಥಿಕವಾಗಿ ಸದೃಢರಾಗುವಂತೆ ತರಬೇತಿಗಳನ್ನು ನೀಡುತ್ತಾ ಯಾವ ರೀತಿಯಾಗಿ ತಮ್ಮ ಕಾರ್ಯ ಯೋಜನೆಗಳನ್ನು ಅನುಷ್ಠಾನಿಸಬಹುದು ಅನ್ನುವುದರ ಕುರಿತು 2017–2020ರ ಯೋಜನೆಯಲ್ಲಿ ಸಂಪೂರ್ಣವಾಗಿ ಕೇಂದ್ರಕ್ಕೆ ಮಾರ್ಗದರ್ಶಿಸಿರುತ್ತಾರೆ. ಅಲ್ಲದೆ ನಮ್ಮ ಕೇಂದ್ರದ ತಾಲೂಕು ಘಟಕಗಳ ಸದಸ್ಯರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಮಾರ್ಪಡಿಸಿ, ಅನೇಕ ಸಂಸ್ಥೆಗಳು, ಇಲಾಖೆಗಳು ಗುರುತಿಸುವ ಮಟ್ಟಿನಲ್ಲಿ ಸಬಲರನ್ನಾಗಿಸಿದ್ದಾರೆ. ಮಾನವ ಸಂಪನ್ಮೂಲದಲ್ಲೂ ಸದೃಢತೆಯನ್ನು ಹೊಂದಿದ ಜಿಲ್ಲಾ ಸಂಪನ್ಮೂಲ ಕೇಂದ್ರವು ಗುಣಮಟ್ಟದ ಶಿಕ್ಷಣ–ಮೌಲ್ಯಾಧಾರಿತ ಶಿಕ್ಷಕನ ಹಾಗೂ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯು ಪರಿಕಲ್ಪನೆಯೆಡೆ ಹೆಜ್ಜೆ ಇಟ್ಟು ಸಮುದಾಯದಲ್ಲೊಂದು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ಪಡಿ ಸಂಸ್ಥೆಗೆ ಚಿರಋಣಿಗಳಾಗಿರುತ್ತೇವೆ.

*****

# ಮೊಟ್ಟಮೊದಲ ಬಾರಿಗೆ ಮಕ್ಕಳ ನಗರಸಭೆ ಮತ್ತು ಮಕ್ಕಳ ಪುರಸಭೆ

ಮಕ್ಕಳ ರಕ್ಷಣೆಯನ್ನು ಅವರ ಹಕ್ಕುಗಳ ಆಧಾರಿತ ವಿಧಾನದಲ್ಲಿ ಒದಗಿಸಲು ಬದ್ಧವಾಗಿರುವುದರೊಂದಿಗೆ, ಕಾನೂನಾತ್ಮಕವಾಗಿ ಗುರುತಿಸಲ್ಪಟ್ಟ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಭಾಗವಹಿಸುವಿಕೆಯನ್ನು ಒಳಗೊಂಡಂತೆ ಮಕ್ಕಳ ರಕ್ಷಣೆ ಹಾಗೂ ಸುರಕ್ಷತೆಯ ಕುರಿತಂತೆ ಜನಜಾಗೃತಿಗಾಗಿ ತಳ ಹಂತದಿಂದ ಪ್ರಚಾರ ಆಗಬೇಕಾಗಿದೆ. ಪ್ರತಿಯೊಂದು ಮಗುವು ಎಲ್ಲಾ ಸಂದರ್ಭದಲ್ಲಿಯೂ ಎಲ್ಲಾ ರೀತಿಯ ಹಿಂಸೆ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ಪಡೆಯಬೇಕಾಗಿದೆ. ಈ ಆಶಯಗಳ ತತ್ವಗಳಿಗೆ ಪೂರಕವಾಗಿ ಹಾಗೂ ಕಾಲಕಾಲಕ್ಕೆ ಗುಣಾತ್ಮಕವಾದ ಶೈಕ್ಷಣಿಕ ಬದಲಾವಣೆ ಮತ್ತು ಮಾರ್ಪಾಡುಗಳಿಗಾಗಿ ಸಮುದಾಯ ಸಹಭಾಗಿತ್ವದ ಆಲೋಚನೆಯೊಂದಿಗೆ ಉಡುಪಿ ಜಿಲ್ಲೆಯಲ್ಲಿ ಪ್ರಾರಂಭವಾದ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ) ಉಡುಪಿ ಹಾಗೂ ಕುಂದಾಪುರ, ಕಾರ್ಕಳ ಉಡುಪಿ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಕಳೆದ 15 ವರ್ಷಗಳಿಂದ ಉಡುಪಿ ಜಿಲ್ಲೆಯಾದ್ಯಂತ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಹಾಗೂ ಗುಣಮಟ್ಟದ ಶಿಕ್ಷಣದ ಅನುಷ್ಠಾನದಲ್ಲಿ ಸಮುದಾಯದ ಸಹಭಾಗಿತ್ವದ ಕುರಿತು ಹಲವಾರು ಕಾರ್ಯಕ್ರಮಗಳನ್ನು ತಳ ಹಂತದಿಂದ ಜಿಲ್ಲಾ ಮಟ್ಟದವರೆಗೂ ಹಮ್ಮಿಕೊಂಡು ಸಮುದಾಯದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುತ್ತಾ ಬಂದಿರುತ್ತದೆ. ಅಲ್ಲದೆ ಈ ಕಾರ್ಯಕ್ರಮಗಳಿಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ ಹಾಗು ಸಮಾಜ ಕಲ್ಯಾಣ ಇಲಾಖೆ ಇವರುಗಳೊಂದಿಗೆ ಸಹಕಾರವನ್ನು ಪಡೆದಿರುತ್ತದೆ.

ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ.) ಉಡುಪಿಯು ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಗ್ರಾಮ ಮಟ್ಟದಲ್ಲಿ ಮಕ್ಕಳಿಗೆ ಮಕ್ಕಳ ಗ್ರಾಮ ಸಭೆ ಇದೆ ಮತ್ತು ಮಕ್ಕಳು ತಮ್ಮ ಸಮಸ್ಯೆಗಳನ್ನು ಅಲ್ಲಿ ಹೇಳಿಕೊಳ್ಳುವುದರ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾರೆ. ಆದರೆ ನಗರದ ಮಕ್ಕಳು ಈ ಒಂದು ಅವಕಾಶವಿಲ್ಲವೆಂಬುವುದು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರ ಗಮನಕ್ಕೆ ಬರುತ್ತದೆ. ಈ ಒಂದು ವಿಷಯವನ್ನು ತಾಲೂಕು ಮತ್ತು ಜಿಲ್ಲಾ ಸಮಿತಿಯಲ್ಲಿ ಚರ್ಚೆ ನಡೆಸಿ, ನಗರ ಮತ್ತು ಪುರಸಭಾ ವ್ಯಾಪ್ತಿಯ ಮಕ್ಕಳಿಗೆ ಒಂದು ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ವಕಾಲತು ಸಮಿತಿಯ ಸಭೆ ಕರೆದು ಈ ವಿಷಯವಾಗಿ ಜಿಲ್ಲಾಧಿಕಾರಿಯವರಿಗೆ ಮನವಿ ನೀಡುವುದರ ಮೂಲಕ ನಗರ ಮತ್ತು ಪುರಸಭಾ ವ್ಯಾಪ್ತಿಯಲ್ಲಿ ಮಕ್ಕಳ ಪುರಸಭೆ ಮತ್ತು ಮಕ್ಕಳ ನಗರಸಭೆ ಮಾಡಬೇಕು ಎಂದು ಜಿಲ್ಲಾಧಿಕಾರಿಯವರನ್ನು ಒತ್ತಾಯಿಸಿದರು. ಇದಕ್ಕೆ

ಜಿಲ್ಲಾಧಿಕಾರಿಯವರು ಮಕ್ಕಳ ವಿಷಯವಾಗಿ ನನ್ನ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿ, ಸುತ್ತೋಲೆಯನ್ನು ಪುರಸಭಾ ಮತ್ತು ನಗರಸಭೆಯಲ್ಲಿ ಮಕ್ಕಳ ಪುರಸಭೆ ಮತ್ತು ಮಕ್ಕಳ ನಗರಸಭೆ ಮಾಡಬೇಕು ಎಂದು ಆಯುಕ್ತರಿಗೆ ಕಳುಹಿಸಿದರು. ಮೊದಲ ಬಾರಿಗೆ ಕಾರ್ಕಳದಲ್ಲಿ ಮಕ್ಕಳ ಪುರಸಭೆ ನಡೆಯಿತು. ಪುರಸಭಾ ವ್ಯಾಪ್ತಿಯ ಶಾಲೆಗಳ ಸುಮಾರು 20–30 ಪ್ರತಿನಿಧಿ ಮಕ್ಕಳು ಈ ಸಭೆಯಲ್ಲಿ ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಗಳು ಭಾಗವಹಿಸಿದ್ದು, ಮಕ್ಕಳ ಬೇಡಿಕೆಗಳಿಗೆ ಉತ್ತಮವಾಗಿ ಸ್ಪಂಧಿಸಿದರು. ಕುಂದಾಪುರ ತಾಲೂಕಿನಲ್ಲಿ ಮೊದಲ ಬಾರಿಗೆ ಕುಂದಾಪುರ ಸಭೆಯಲ್ಲಿ ಮಕ್ಕಳ ಪುರಸಭೆ ನಡೆಯಿತು. ತಾಲೂಕು ವ್ಯಾಪ್ತಿಯ ಸುಮಾರು 50–70 ಪ್ರತಿನಿಧಿ ಮಕ್ಕಳು ಭಾಗವಹಿಸಿದರು. ಗ್ರಾಮಗಳಿಗಿಂತ ನಗರದಲ್ಲಿ ಹೆಚ್ಚಿನ ಸಮಸ್ಯೆಗಳು ಕಂಡುಬಂದಿದ್ದು ಆಶ್ಚರ್ಯವೆನಿಸಿತು. ಇಲಾಖಾ ಅಧಿಕಾರಿಗಳು ಮಕ್ಕಳ ಸಮಸ್ಯೆಗಳಿಗೆ ಉತ್ತಮವಾಗಿ ಸ್ಪಂದಿಸಿದ್ದು, ಮಕ್ಕಳ ಬೇಡಿಕೆಗಳನ್ನು ಈಡೇರಿಸಲು ಸಮಿತಿಗಳನ್ನು ಮಾಡಿದರು.

ನಂತರ ದಿನಗಳಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆಯ ಆಯುಕ್ತರ ಮೇರೆಗೆ ಮಕ್ಕಳ ನಗರಸಭೆ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ನಡೆಯಿತು. ನಗರ ವ್ಯಾಪ್ತಿಯ ಸುಮಾರು 30 ಪ್ರತಿನಿಧಿ ಮಕ್ಕಳು ಭಾಗವಹಿಸಿದರು, ಸುಮಾರು 13 ಮುಖ್ಯ ಪ್ರಸ್ತಾಪಗಳನ್ನು ಪ್ರಶ್ನೆಗಳ ರೂಪದಲ್ಲಿ ಮಕ್ಕಳು ಕೇಳಿದ್ದು, ಮಕ್ಕಳ ಸಮಸ್ಯೆಗಳಿಗೆ ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಯ ಎಲ್ಲಾ ನಗರ ಮತ್ತು ಪುರಸಭೆಯಲ್ಲಿ ಮಕ್ಕಳ ಸಭೆ ನಡೆಯಬೇಕು ಎಂದು ನಗರ ಆಯುಕ್ತರು ತಿಳಿಸಿದರು.



ಉಡುಪಿ: ಉಡುಪಿ ತಾಲೂಕಿನ ಮಕ್ಕಳ ಸಮಸ್ಯೆಗಳ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಚರ್ಚಿಸುವುದರ ಮೂಲಕ ಮಕ್ಕಳಿಗೆ ಸೂಕ್ತ ಪರಿಹಾರ ನೀಡುವುದರ ಜತೆಗೆ ಮಕ್ಕಳ ಹಕ್ಕುಗಳಿಗೆ ನ್ಯಾಯ ಒದಗಿಸಬೇಕೆಂದು ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿ, ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ, ಎಸ್.ಡಿ.ಎಂ. ಸಿ.ಸಮನ್ವಯ ವೇದಿಕೆ ವತಿಯಿಂದ ಶಾಸಕ ಕೆ. ರಘುಪತಿ ಭಟ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮಕ್ಕಳ ಸಮಸ್ಯೆಗಳ ಪಟ್ಟಿ ಈ ಕೆಳಕಂಡಂತಿವೆ. ಇವುಗಳನ್ನು ವಕಾಲತು ಸಮಿತಿ ತನ್ನ ಕಾರ್ಯಾನುಷ್ಠಾನದ ಪ್ರಕ್ರಿಯೆಯಲ್ಲಿ ಅನುಸರಣೆ ಮಾಡುತ್ತಿದೆ.

1. ಶಿಕ್ಷಣದ ಆಯೋಗದ ಶಿಫಾರಸ್ಸಿನಂತೆ ದೇಶದ ಒಟ್ಟು ಉತ್ಪನ್ನದಲ್ಲಿ ಶೇಕಡಾ 6ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಲು ಮತ್ತು ಹಿಂದಿನಿಂದ ಶಿಕ್ಷಣದ ಹೂಡಿಕೆಯಲ್ಲಿ ಆಗಿರುವ ಅನ್ಯಾಯವನ್ನು ಸರಿದೂಗಿಸುವ ಕುರಿತು ವಿದಾನ ಸಭೆಯಲ್ಲಿ ಚರ್ಚಿಸಬೇಕು.

2. ಶಿಕ್ಷಣ ಹಕ್ಕು ಕಾಯಿದೆಯನ್ನು 18 ವರ್ಷಕ್ಕೆ ವಿಸ್ತರಿಸುವುದು.

3. ಕರಾವಳಿ ಜಿಲ್ಲೆಯಲ್ಲಿ ಶಾಲೆಯ ಮಕ್ಕಳಿಗೆ ಬಿಸಿಯೂಟದಲ್ಲಿ ಮಕ್ಕಳು ಬಾಲ್ಯದಿಂದಲೇ ಸೇವಿಸಿಕೊಂಡು ಬಂದಿರುವ ಕುಚ್ಚಲಕ್ಕಿಯನ್ನು ನೀಡಬೇಕು.

4. ಪೋಕ್ಸೋ ಪ್ರಕರಣಗಳು ಕಾಯಿದೆಯ ಪ್ರಕಾರ 3 ತಿಂಗಳಲ್ಲಿ ಇತ್ಯರ್ಥವಾಗಬೇಕಾಗಿದ್ದು, ಆದರೆ ಬಹುತೇಕ ಪ್ರಕರಣಗಳು 3 ವರ್ಷವಾದರೂ ಇತ್ಯರ್ಥವಾಗದೇ ಇರುವುದರಿಂದ ಜಿಲ್ಲಾ ಮಟ್ಟದಲ್ಲಿ ಮಕ್ಕಳ ವಿಶೇಷ ನ್ಯಾಯಾಲಯ ರಚನೆಗೆ ವ್ಯವಸ್ಥೆಗೊಳಿಸಬೇಕು.

5. ಪೊಲೀಸ್ ಠಾಣೆಯಲ್ಲಿ ಬಾಲನ್ಯಾಯ ಕಾಯಿದೆಯ ಉಲ್ಲಂಘನೆಯಾಗುತ್ತಿದ್ದು ಮಗುಸ್ನೇಹಿ ಪೋಲೀಸ್ ಠಾಣೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು.

6. ಶಿಕ್ಷಣ ಹಕ್ಕು ಕಾಯ್ದೆಗೆ ಸೂಕ್ತ ತಿದ್ದುಪಡಿ ಮಾಡುವ ಮೂಲಕ ಆರಂಭಿಕ ಮಕ್ಕಳ ಅಭಿವೃದ್ಧಿ (ECD), ಪೂರ್ವಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಪ್ರೌಢ ಶಿಕ್ಷಣವನ್ನು ಅಂತರಾಷ್ಟ್ರೀಯ ಕಾನೂನುಗಳ ಚೌಕಟ್ಟು ಮತ್ತು ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಅನುಗುಣವಾಗಿ ಕಾನೂನು ಬದ್ಧ ಹಕ್ಕನ್ನಾಗಿಸುವ ಕುರಿತು.

7. ಮಕ್ಕಳ ರಕ್ಷಣಾ ನೀತಿ–2016ರನ್ವಯ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯುನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವುದನ್ನು ಖಾತರಿಗೊಳಿಸುವುದು ಮತ್ತು ಈ ನೀತಿಯನ್ನು ಕಾಯಿದೆಯನ್ನಾಗಿ ಮಾಡಿ ರಾಜ್ಯದ ಎಲ್ಲಾ ಮಕ್ಕಳಿಗೆ ಮಕ್ಕಳ ಸ್ನೇಹಿ ವಾತಾವರಣವನ್ನು ನಿರ್ಮಿಸುವುದು.

8. ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಲು ಮತ್ತು ಸರ್ಕಾರಿ ಶಾಲೆಗಳನ್ನು ಸಾಮೂಹಿಕವಾಗಿ ಮುಚ್ಚುವ/ವಿಲೀನಗೊಳಿಸುವ ಪ್ರಕ್ರಿಯೆಯನ್ನು ಪೂರ್ಣವಾಗಿ ನಿಲ್ಲಿಸುವ ಕುರಿತು ಸೂಕ್ತ ವ್ಯವಸ್ಥೆಯನ್ನು ಮಾಡುವುದು.

9. ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪರೀಕರಣವನ್ನು ಪೂರ್ಣವಾಗಿ ನಿಯಂತ್ರಿಸಿ, ಖಾಸಗಿ ಶಾಲೆಗಳು ಜನಸಾಮಾನ್ಯರಿಗೆ ಹೊಣೆಗಾರಿಕೆ ಮತ್ತು

ಉತ್ತರದಾಯಿತ್ವವನ್ನು ಹೊಂದಿರಲು ಅನುವಾಗುವಂತೆ ಶುಲ್ಕ ನಿಯಂತ್ರಣ, ಗುಣಾತ್ಮಕ ಶಿಕ್ಷಣಕ್ಕಾಗಿ ಕನಿಷ್ಠ ಪ್ರಮಾಣಕಗಳು ಹಾಗೂ ಮಾನದಂಡಗಳು ಮತ್ತು ಪೋಷಕರ ಪಾಲ್ಗೊಳ್ಳುವಿಕೆಗೆ ಪೂರಕವಾಗುವ ಸಾಂಸ್ಥಿಕ ರಚನೆಯನ್ನು ಒಳಗೊಂಡಿರುವ ಕಟ್ಟುನಿಟ್ಟಾದ ವಿಸ್ತೃತ ನಿಯಂತ್ರಣ ಕಾನೂನನ್ನು ರೂಪಿಸಿ ಜಾರಿಗೊಳಿಸುವ ಕುರಿತು.

10. ಪಂಚಾಯತಿಗೆ ಅವರ ಯೋಜನೆಯನ್ನು ಅನುಷ್ಠಾನಗೊಳಿಸಲು ಸರಕಾರ ಅನುದಾನ ನಿಗದಿಪಡಿಸಿದೆಯೋ ಅದೇ ರೀತಿಯಲ್ಲಿ ಶಾಲೆಗಳಿಗೂ ಕೂಡಾ ಶಾಲಾಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುದಾನ ನೀಡಬೇಕು.

11. ತರಗತಿವಾರು ಶಿಕ್ಷಕರನ್ನು ನೀಡುವುದರ ಜೊತೆಗೆ ಶಿಕ್ಷಕರು ತಮ್ಮ ಅವಧಿಯನ್ನು ಕಲಿಕೆಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಎಲ್ಲಾ ಶಾಲೆಗಳಲ್ಲಿ ಶಾಲಾ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸಲು ಸಹಾಯಕರನ್ನು ನೇಮಿಸುವುದು.

12. ಜಿಲ್ಲೆಗಳಲ್ಲಿ ಈಗಾಗಲೇ ಇರುವ ವೀಕ್ಷಣಾಲಯಗಳಲ್ಲಿ ಮಕ್ಕಳಿಗೆ ಯಾವುದೇ ಪೂರಕ ಶಿಕ್ಷಣ ನೀಡದೆ ಬಂದಿಯಂತೆ ಇಡುವ ಬದಲು ಶಿಕ್ಷಣಕ್ಕೆ ವ್ಯವಸ್ಥೆಗೊಳಿಸಿ ಮುಂದೆ ಆ ಮಗುವು ಸಮಾಜದಲ್ಲಿ ಉತ್ತಮ ನಾಗರಿಕನಂತೆ ಬೆಳೆಯಲು ಸೂಕ್ತ ವ್ಯವಸ್ಥೆಗೊಳಿಸುವುದು.

13. ಪ್ರಸ್ತುತ ಇರುವ ಹೆಚ್ಚಿನ ಪಂಚಾಯತಿಗಳು ಸಾಮಾನ್ಯ ಜನರಿಗೆ ಮಾಹಿತಿ ನೀಡುವಂತಾಗಬೇಕು ಮಾತ್ರವಲ್ಲದೇ ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲೇ ನ್ಯಾಯ ಸಿಗುವ ನಿಟ್ಟಿನಲ್ಲಿ ಸ್ಥಳೀಯ ಮಟ್ಟದ ಕುಂದುಕೊರತೆಯ ನಿವಾರಣೆಗೆ ಇರುವ ವ್ಯವಸ್ಥೆಗಳನ್ನು ಬಲಪಡಿಸಬೇಕು.

14. ಮಕ್ಕಳ ಗ್ರಾಮಸಭೆಯು ಪಂಚಾಯತಿ ಮಟ್ಟದಲ್ಲಿ ನಡೆಯುತ್ತಿದೆ. ಆದರೆ ವಾರ್ಡ್‌ಮಟ್ಟದಲ್ಲಿ ಮಕ್ಕಳ ಸಮಸ್ಯೆಗಳಿಗೆ ಸ್ಪಂದನೆ ನೀಡುವ ನಿಟ್ಟಿನಲ್ಲಿ ವಾರ್ಡ್‌ಮಟ್ಟದಲ್ಲಿ ಮಕ್ಕಳಿಗೆ ವೇದಿಕೆಯನ್ನು ನೀಡುವ ನಿಟ್ಟಿನಲ್ಲಿ ಪಂಚಾಯತ್‌ರಾಜ್ ಕಾಯಿದೆಗೆ ತಿದ್ದುಪಡಿ ತರಬೇಕು.

*****

## ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ– ದ.ಕ. ಜಿಲ್ಲೆ

ಪಡಿ ಸಂಸ್ಥೆಯು ತಮ್ಮ ಯೋಜನೆಯ ಮೂಲಕ ಕಳೆದ 25 ವರ್ಷಗಳಿಂದ ದ.ಕ ಮತ್ತು ಉಡುಪಿ ಜಿಲ್ಲೆಯಾದ್ಯಂತ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ ಪರಿಕಲ್ಪನೆಯತ್ತ ಸಮುದಾಯದ ಮೂಲಕ ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಸಮಾನ ಮನಸ್ಕ ವ್ಯಕ್ತಿಗಳನ್ನೊಳಗೊಂಡ ಸಮುದಾಯಾಧಾರಿತ ಸಂಘಟನೆಯಾದ ಶಿಕ್ಷಣ ಸಂಪನ್ಮೂಲ ಕೇಂದ್ರಗಳನ್ನು ರೂಪಿಸಿ ಅದು ಸದಾ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮೌಲ್ಯಯುತ ಶಿಕ್ಷಣಕ್ಕಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ.

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ– ದ.ಕ. ಸ್ವತಂತ್ರವಾಗಿ ನಿರ್ವಹಿಸುತ್ತಿರುವ, ನೋಂದಾಯಿತ ಸಂಸ್ಥೆಯಾಗಿದ್ದು, ಕಳೆದ 10 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಾ ಬಂದಿದೆ.

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟವು ಪ್ರಾರಂಭಿಕ ಹಂತದಲ್ಲಿ ಪಡಿಯಿಂದ ಆರ್ಥಿಕ ಮತ್ತು ಬೌದ್ಧಿಕವಾಗಿ ಪ್ರೋತ್ಸಾಹ ದೊರಕಿದ್ದರೂ ನಂತರದ ಹಂತದಲ್ಲಿ ಸ್ವತಂತ್ರವಾಗಿ ತನ್ನ ಆಡಳಿತವನ್ನು ನೋಡಿಕೊಳ್ಳುವುದು, ವಾರ್ಷಿಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಂಡು ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಬೇಕಾದ ಆರ್ಥಿಕ ಸಂಪನ್ಮೂಲವನ್ನು ಕ್ರೋಢಿಕರಿಸುವುದು ಹಾಗೂ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ವಕಾಲತ್ತು ವಹಿಸುವ ಕಾರ್ಯ ಮಾಡುತ್ತಾ ಬಂದಿದೆ.

ತೀವ್ರತರವಾಗಿ ಬೆಳೆಯುತ್ತಿರುವ ದ.ಕ. ಜಿಲ್ಲೆಯಲ್ಲಿ ಮಕ್ಕಳ ಭಿಕ್ಷಾಟನೆ, ಮಕ್ಕಳ ಮಾರಾಟ ಹಾಗೂ ಸಾಗಾಟ, ಮಾದಕದ್ರವ್ಯ ಸಾಗಾಟ ಮತ್ತು ಮಾರಾಟಕ್ಕೆ ಹದಿಹರೆಯದ ಮಕ್ಕಳು ಬಲಿಯಾಗುವುದು, ಬಾಲ ಕಾರ್ಮಿಕತನ, ವಲಸೆ ಬಂದ ಕಟ್ಟಡ ಕಾರ್ಮಿಕರ ಮಕ್ಕಳ ನಿರ್ಲಕ್ಷತೆ, ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಹೆಚ್ಚುತ್ತಾ ಇದೆ, ಇದನ್ನು ತಡೆಗಟ್ಟಲು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ, ಇತರ ಸಮಾನ ಮನಸ್ಕರ ಜೊತೆ ಸೇರಿ ಮಕ್ಕಳ ಮಸೋತ್ಸವ ಕಾರ್ಯಕ್ರಮವನ್ನು ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಸಲಾಯಿತು.

ಮಕ್ಕಳ ಸಂಸತ್ತು, ತೆರೆದ ಮನೆ, ಪೋಕ್ಸೋ ಕಾಯ್ದೆ ಮಾಹಿತಿ ಕಾರ್ಯಕ್ರಮ, ಮಕ್ಕಳ ರಕ್ಷಣೆ ಮತ್ತು ಪೋಷಣೆಯಲ್ಲಿ ಪೋಷಕರ ಪಾತ್ರ, ಸರ್ಕಾರದ ಜೊತೆ

ಮಕ್ಕಳ ಸಂವಾದ ಕಾರ್ಯಕ್ರಮ, ಮಕ್ಕಳ ಸಾಗಾಣಿಕೆ ಮತ್ತು ರಕ್ಷಣೆ ಕುರಿತು, ಜಿಲ್ಲಾ ಮಟ್ಟದ ಸಾರ್ವಜನಿಕ ಸಂವಾದ, ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಇಂತಹ ಅನೇಕ ಕಾರ್ಯಕ್ರಮಗಳನ್ನು ಮಕ್ಕಳ ಮಾಸೋತ್ಸವ ಯೋಜನೆಯಡಿಯಲ್ಲಿ ಆಯೋಜಿಸಲಾಯಿತು. ಪ್ರತೀ ತಾಲೂಕು ಕಾರ್ಯಕ್ರಮದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಗಣನೆಗೆ ತೆಗೆದುಕೊಂಡು, ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಚರ್ಚಿಸಿ, ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

**ಮಕ್ಕಳ ಮಾಸೋತ್ಸವದ ನಿರ್ಣಯಗಳು:**

- ನಗರ ಪ್ರದೇಶದ ಮಕ್ಕಳಿಗೆ ಪ್ರತಿ ವರ್ಷಕ್ಕೊಮ್ಮೆ ಸ್ಥಳೀಯಾಡಳಿತದೊಂದಿಗೆ ಸಾರ್ವಜನಿಕ ಸಂವಾದ ಕಾರ್ಯಕ್ರಮ ಮಾಡುವುದು
- ಪ್ರತಿ ಗ್ರಾಮಪಂಚಾಯತ್‌ನಲ್ಲಿ ವಲಸೆ ನೋಂದಾವಣೆ ದಾಖಲೀಕರಣ ಮಾಡುವುದು.
- ಜಿಲ್ಲೆಯ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ 'ಮಕ್ಕಳ ರಕ್ಷಣಾ ನೀತಿ'ಯನ್ನು ಮೂರು ತಿಂಗಳೊಳಗೆ ಅನುಷ್ಠಾನ ಮಾಡುವುದು.
- 'ಮಕ್ಕಳ ರಕ್ಷಣಾ ನೀತಿ'ಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರಕಾರ ಕಾಯಿದೆಯ ರೂಪದಲ್ಲಿ ಜಾರಿಗೆ ತರುವುದು.
- ಬಾಲ ನ್ಯಾಯ ಕಾಯಿದೆ–2015 ಕರಡು ರೂಪದಲ್ಲಿರುವ ನಿಯಾಮವಳಿಗಳನ್ನು ಜಾರಿಗೆತರುವುದು.
- ಆರ್.ಟಿ.ಇ. ಕಾಯಿದೆ ಅಡಿಯಲ್ಲಿ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಸರಕಾರಿ ಶಾಲೆ ಮತ್ತು ಸರ್ಕಾರಿ ನೋಂದಾಯಿತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವಂತಾಗಬೇಕು.
- NOISE ನೊಂದಾಯಿಸಿ, ಶಾಲೆಯಿಂದ ಹೊರಗುಳಿದ ಮಕ್ಕಳು ಎಂದು ತೋರಿಸುವ ಗೊಂದಲ ಸರಿಪಡಿಸಬೇಕು.
- ಬಾಲ ಕಾರ್ಮಿಕ ಕಾಯಿದೆ ಅನ್ವಯ' ವಿಚಕ್ಷಣಾ ದಳ' ಜಾರಿಗೆ ತರುವುದು.
- ಆರ್.ಟಿ.ಇ. ಕಾಯಿದೆ ಅಡಿಯಲ್ಲಿ ಪ್ರತೀ ತರಗತಿಯಲ್ಲಿ ಮಕ್ಕಳ ಕಲಿಕಾ ಮಟ್ಟವನ್ನು ಅಳೆಯುವ ಕ್ರಮ ಕೈಗೊಳ್ಳಬೇಕು.
- ಎಸ್.ಡಿ.ಎಂ.ಸಿ. ಸಮಿತಿ ಮೂಲಕ ಅವರ ಶಾಲೆಯಲ್ಲಿ ಮಕ್ಕಳ ಕಲಿಕಾ ಗುಣಮಟ್ಟವನ್ನು ಅಳೆಯಲು ತಜ್ಞರುಗಳ ಹಾಗೂ 'ಅಸರ್' ಸಹಾಯದಿಂದ ವರದಿ ತಯಾರಿಸಿ ಶಿಕ್ಷಣ ಇಲಾಖೆಗೆ ಸಲ್ಲಿಸುವುದು.

- ಪ್ರತಿ ವರ್ಷವು ಸ್ಥಳೀಯ ಶಾಸಕರ ನೇತೃತ್ವದಲ್ಲಿ ಮಕ್ಕಳ ಸಂಸತ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ಆರ್.ಟಿ.ಇ. ಕಾಯಿದೆಯನ್ನು ಪ್ರತಿ ಹತ್ತು ವರ್ಷಕ್ಕೊಮ್ಮೆ ವಿಮರ್ಶಿಸಿ, ತಿದ್ದುಪಡಿಗೊಳಿಸುವುದು.
- ಮಕ್ಕಳು ಮಾದಕ ವಸ್ತು ಸೇವನೆಗೆ ಬಲಿಯಾಗುವುದರ ಕುರಿತು ರಾಜ್ಯದ್ಯಂತ ಜನಜಾಗೃತಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಮಾದಕ ವಸ್ತು ಸೇವನೆಗೊಳಗಾದ ಮಕ್ಕಳ ಪುನರ್ವಸತಿಗಾಗಿ ಜಿಲ್ಲಾಡಳಿತದ ಮೂಲಕ ಪುನರ್ವಸತಿ ಕೇಂದ್ರಗಳನ್ನು ತೆರೆಯಬೇಕು.
- ಮಕ್ಕಳ ಗ್ರಾಮ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜಿಲ್ಲಾ ಮಟ್ಟದಲ್ಲಿ ಹಿರಿಯ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಉನ್ನತ್ತ ಮಟ್ಟದಲ್ಲಿ ಸಭೆ ನಡೆಸಿ ತಿರ್ಮಾನ ಕೈಗೊಳ್ಳುವುದು.
- ಜಿಲ್ಲಾ ಮಟ್ಟದಲ್ಲಿ ಪ್ರತಿ ವರ್ಷ ಮಕ್ಕಳ ಹಕ್ಕುಗಳ ಕಲಾ ರಂಗೋತ್ಸವ ಕಾರ್ಯಕ್ರಮವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನೇತೃತ್ವದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಪೋಕ್ಸೋಕಾಯಿದೆ, ಬಾಲ್ಯ ವಿವಾಹ ನಿಷೇಧಕಾಯಿದೆ, ಬಾಲ ಕಾರ್ಮಿಕ, ಬಾಲ ನ್ಯಾಯಕಾಯಿದೆ ಇತ್ಯಾದಿ ಮಕ್ಕಳಿಗೆ ಸಂಬಂಧಿಸಿದ ಕಾಯಿದೆಗಳ ಬಗ್ಗೆ ಅಂಗನವಾಡಿ ಶಿಕ್ಷಕರು, ಆರೋಗ್ಯ ಇಲಾಖೆಯು ಆಶಾ ಕಾರ್ಯಕರ್ತೆಯರು ಹಾಗೂ ಸ್ತ್ರೀ ಶಕ್ತಿ ಸಂಘದವರು ಇವರಿಗೆ ಇಲಾಖಾ ವತಿಯಿಂದ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳುವುದು.

ಮಕ್ಕಳ ಮಸೋತ್ಸವ ಕಾರ್ಯಕ್ರಮದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಲ್ಲಿಸಲಾಯಿತು. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟವು ತನ್ನ ಎಲ್ಲಾ ಕಾರ್ಯಕ್ರಮಗಳನ್ನು ಇಲಾಖೆಯ ಮತ್ತು ಸರ್ಕಾರದ ಸಹಯೋಗದಿಂದ ಜೊತೆ–ಜೊತೆಯಾಗಿ ನಡೆಸಿಕೊಂಡು ಹೋಗುತ್ತಿದ್ದು, ಮಕ್ಕಳ ಹಕ್ಕುಗಳಿಗೆ ಸ್ಥಾನ–ಮಾನ ಒದಗಿಸುವುದು, ಹಾಗೂ ಆರ್.ಟಿ.ಇ. ಕಾಯ್ದೆಯ ಸಮರ್ಪಕವಾದ ಅನುಷ್ಠಾನವನ್ನು ಸರ್ಕಾರದ ಜೊತೆಗೆ ವಕಾಲತ್ತು ಮಾಡುವುದರ ಮೂಲಕ ಬಗೆಹರಿಸಲು ಪ್ರಯತ್ನಿಸುತ್ತಿದೆ. ಹಾಗೂ ಇದರಲ್ಲಿ ಸಫಲತೆಯನ್ನು ಕಂಡಿದೆ.

*****

# ಶಿಕ್ಷಣ ಸಂಪನ್ಮೂಲ ಕೇಂದ್ರದ ಮೂಲಕ ವೆಲೊರೆಡ್ ಪರಿಕಲ್ಪನೆಯಲ್ಲಿ ನಾನು



**ಅನಂತರಾಮ್ ಹೇರಳೆ**
**ಸಂಪನ್ಮೂಲ ವ್ಯಕ್ತಿ**
**ಮಂಗಳೂರು ಶಿಕ್ಷಣ ಸಂಪನ್ಮೂಲ ಕೇಂದ್ರ**

ಪರೀಕ್ಷೆಗಾಗಿ ಕಲಿಯುವುದು; ಪರೀಕ್ಷೆಗಾಗಿ ಕಲಿಸುವುದು ಮತ್ತು ಪರೀಕ್ಷೆಯಿಂದ ಫಲಿತಾಂಶ ತಿಳಿಸುವುದು; ಇದು ಶಿಕ್ಷಣದಲ್ಲಿ ಕಂಡುಬಂದ ವಿಚಾರ. ಪರೀಕ್ಷೆಯ ನಂತರ ವಿದ್ಯಾರ್ಥಿ ಮರೆತು ಬಿಡುತ್ತಾನೆ. ಶಿಕ್ಷಕನೂ ಮರೆಯುತ್ತಾನೆ. ಇಲಾಖೆಗೂ ಈ ಬಗ್ಗೆ ಗೊಡವೆ ಬೇಡವಾಗಿರುತ್ತದೆ, ತರಗತಿಯಲ್ಲಿ ವೃತ್ತವನ್ನು ಕಲಿತ ಮಗು ಮನೆಯ ಬಾವಿ ವೃತ್ತಾಕಾರವಾಗಿದೆ, ಅದರ ಘನ ಪರಿಮಾಣ ಕಂಡುಹಿಡಿಯಲು ನಾನು ಸಮರ್ಥ ಎಂದು ತಿಳಿಯಲಾರದ ಸ್ಥಿತಿ.

ಈ ವಿಚಾರಕ್ಕೆ ಪರ್ಯಾಯ ಕಂಡುಕೊಳ್ಳಬೇಕೆಂದು ಆಲೋಚಿಸುವಾಗ ಈ ಬಗ್ಗೆ ಸಮಾನ ಮನಸ್ಕರು ಕಾರ್ಯಾಗಾರ ತರಬೇತಿ ನೀಡುವ ಸುದ್ದಿ ತಿಳಿದ ಕೂಡಲೇ ಅಲ್ಲಿಗೆ ಹೋಗಿ ಭಾಗವಹಿಸಿ ಅನುಭವ ಪಡೆಯುವ ಪ್ರಯತ್ನ ಮಾಡುತ್ತಿದ್ದೆ, ಆಗ ವೆಲೋರೆಡ್ ಯೋಜನೆಯು ಸಂಪರ್ಕಕ್ಕೆ ಸಿಕ್ಕಿತು. ಅದರ ಓರ್ವ ಕಾರ್ಯಕರ್ತೆಯಾಗಿದ್ದ ವೀಣಾಧರಿ ಅಲ್ಲಲ್ಲಿ ಮಕ್ಕಳ ಬೇಸಿಗೆ ಶಿಬಿರ, ಶಿಕ್ಷಕರಿಗೆ ತರಬೇತಿ ಸಮುದಾಯದಲ್ಲಿ ಅರಿವಿನ ಸಭೆ ನಡೆಸುವುದು ನನಗೆ ತಿಳಿದು ಬಂತು, ವೆಲೊರೆಡ್ ಯೋಜನೆಯಲ್ಲಿ ಗುಣಮಟ್ಟದ ಶಿಕ್ಷಣ, ಮೌಲ್ಯಾಧಾರಿತ ಶಿಕ್ಷಣವೆನ್ನುವ ಪರಿಕಲ್ಪನೆಯಲ್ಲಿ ಬಹಳಷ್ಟು ಚಿಂತನೆ, ಚರ್ಚೆ ಪರ್ಯಾಯ ವ್ಯವಸ್ಥೆಗಳ ಬಗ್ಗೆ ವಿಚಾರ ಚಿಂತನಮಂಥನಗಳನ್ನು ನಡೆಸುತ್ತಿದ್ದಂತ ಸಮಯವದು. ಕೆಲವರು ಸಹಬಾಗಿತ್ವ ಮತ್ತು ಇನ್ನು ಕೆಲವರು ಉತ್ಸಾಹದಿಂದ ಕಾರ್ಯಕ್ರಮಗಳ ಕುರಿತು ಒಬ್ಬರಿಗೊಬ್ಬರು ತಿಳಿಸುತ್ತಿರುವುದು ಬಹಳ ಮನಾಕರ್ಷವಾಗಿತ್ತು. ಹೀಗೆ ನಾನೂ ಈ ಗುಂಪಿನೊಂದಿಗೆ ಸೇರಿ ಶಿಕ್ಷಕ ವೃತ್ತಿಯಲ್ಲಿರುವ ನನಗೆ ವಿಭಿನ್ನ ರೀತಿಯ ಚಿಂತನೆಗಳು, ಸರಕಾರ ಆಗಾಗ ಶಿಕ್ಷಣದಲ್ಲಿ ಮಾಡುವಂತಹ ಬದಲಾವಣೆಗಳು ಇದನ್ನು ಅನುಷ್ಠಾನಿಸುವಲ್ಲಿ ಶಿಕ್ಷಕರಿಗಾಗುವ ಮಾಹಿತಿ ಕೊರತೆಗಳನ್ನು ತರಬೇತಿಗಳ ಮೂಲಕ ಅರ್ಥೈಸಿಕೊಳ್ಳುವಂತ ಕಾರ್ಯಗಾರಗಳು ಹೀಗೆ ಅನೇಕ ವಿಚಾರಗಳನ್ನು ಜ್ಞಾನಗಳನ್ನು ಪಡೆದು ಶಾಲೆಯಲ್ಲಿ ಶಿಕ್ಷಕನಾಗಿರುವ ನಾನು ಮೌಲ್ಯಯುತ ಶಿಕ್ಷಣದ ಪರಿಕಲ್ಪನೆಯಲ್ಲಿ ಬೋದಿಸಲು ಶಕ್ತನಾದೆನು.

ಆ ವೇಳೆಗಾಗಲೇ ವೆಲೊರೆಡ್ ಯೋಜನೆಯು ಶಿಕ್ಷಣಾಸಕ್ತರ ಗುಂಪುಗಳನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿ ಹೊಂದಿತ್ತು. ಆ ತಾಲೂಕುಗಳನ್ನು ಕಾರ್ಯಕ್ಷೇತ್ರಗಳಾಗಿ ಆರಿಸಿಕೊಂಡು ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರ ಮತ್ತು ಅವುಗಳನ್ನೊಳಗೊಂಡ ಜಿಲ್ಲಾ ಒಕ್ಕೂಟವನ್ನು ರಚಿಸಿ ಅದಕ್ಕೆ ಒಂದು ಬೈಲಾ ರಚಿಸಿ ಕಾರ್ಯಕ್ರಮ ಮುಂದುವರೆಸಿ ಇದಕ್ಕೆ ಒಂದು ರೂಪರೇಖೆ ನೀಡಿ ಸಾಂವಿಧಾನಿಕವಾಗಿ ನಡೆಯುವಂತೆ ಮಾಡಲು ಸಂಘಟನೆಯನ್ನು ಸಂಘಸಂಸ್ಥೆಗಳಲ್ಲಿ ಸಾಮಾನ್ಯವಾಗಿರುವಂತೆ ಇಲ್ಲಿಯ ಸದಸ್ಯರ ನೊಂದಣಿ ಸಭೆ, ಪದಾಧಿಕಾರಿಗಳ ಆಯ್ಕೆ ಮತ್ತು ಅವರ ಹಕ್ಕು ಭಾಧ್ಯತೆಗಳನ್ನು ತಿಳಿಸಿ, ತಿಳಿದು ಕಾರ್ಯಪ್ರವೃತ್ತರಾಗುವ ತರಬೇತಿ ಮೊದಲಾಗಿ ತಿಳಿಯಿತು.

ಕಾರ್ಯಕ್ರಮಗಳನ್ನು ಸಂಘಟಿಸುವಾಗ ಯೋಚನೆ, ಯೋಜನೆ ಕಾರ್ಯಕ್ರಮ ಅನುಷ್ಠಾನ ಮತ್ತು ಮೌಲ್ಯಮಾಪನಗಳನ್ನು ಮಾಡಿ ಯಶಸ್ವಿಗೊಳಿಸಲು ಕಲಿಯುವ ಅವಕಾಶ ಸಿಕ್ಕಿತು. ಇದರಿಂದಾಗಿ ನಮ್ಮ ಸಂಸ್ಥೆ ಬೆಳಿಗ್ಗೆ ಹುಟ್ಟಿ ಮಧ್ಯಾಹ್ನ ಬೆಳೆದು ರಾತ್ರಿ ಸಾಯುವ ಅನೇಕ ಸಂಘಸಂಸ್ಥೆಗಳಂತಾಗದೆ ಇಷ್ಟು ವರ್ಷವೂ ಅಂದರೆ 1993ರಿಂದಲೂ ನಿರಂತರವಾಗಿ ಬೆಳೆದು ಬಾಳುವಂತಾಯಿತು. ಸಂಘದ ಮೌಲ್ಯಮಾಪನವೂ ಪದಾಧಿಕಾರಿಗಳ ಮೌಲ್ಯಮಾಪನವು ಅರಿತು, ಜ್ಞಾನದಲ್ಲಿ ಕೊರತೆಯಿದ್ದಲ್ಲಿ ಯಾವ ರೀತಿ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಬಹುದು ಅನ್ನುವುದನ್ನು ವಿಮರ್ಶಿಸಿ ಸರಿಯಾದ ಸಮಯಕ್ಕೆ ತರಬೇತಿಗಳನ್ನು ನೀಡಿ ಪಡಿ ಸಂಸ್ಥೆಯು ನಮ್ಮನ್ನು ಸಶಕ್ತರನ್ನಾಗಿಸಿದೆ.

ಸರಕಾರವೇನೋ ಕಾನೂನು ರಚಿಸುತ್ತದೆ, ಇದು ಮಕ್ಕಳ ಬಗ್ಗೆಯಾಗಲೀ ಶಾಲೆಯ ಅಭಿವೃದ್ಧಿಗಾಗಲೀ, ಗ್ರಾಮ, ತಾಲೂಕು, ಜಿಲ್ಲೆ ಮತ್ತು ರಾಜ್ಯದಲ್ಲಿರುವ ಜನಪ್ರತಿನಿಧಿಗಳಿಗೂ, ಸರಕಾರಿ ನೌಕರರರಿಗೂ ಇದರ ಅನುಭವವಿರುವುದಿಲ್ಲ. ಮಕ್ಕಳೇ ನಮ್ಮ ಮುಖ್ಯಗುರಿಯಾಗಿರುವುದರಿಂದ ಮಕ್ಕಳ ಮೇಲಾಗುವ ದೌರ್ಜನ್ಯ ಅಥವಾ ಅದರಿಂದಾಗುವ ತೊಂದರೆಗಳು ಇವುಗಳನ್ನು ನಿವಾರಿಸಲು ಅವರ ಹಕ್ಕುಗಳನ್ನು ಮತ್ತು ರಕ್ಷಣೆಯ ಕುರಿತಾದ ಕಾನೂನುಗಳು ಕಾಯಿದೆಗಳು, ಯಾವ ನೆಲೆಯಲ್ಲಿ ಪರಿಹಾರೋಪಾಯಗಳನ್ನು ಮಾಡುವುದು ಇದಕ್ಕೆ ಸಂಬಂಧಿಸಿದ ಇಲಾಖೆಗಳು ಅಧಿಕಾರಿಗಳು ಪ್ರಧಿಕಾರಗಳ ಕುರಿತು ಅರಿವು ಇವುಗಳ ಬಗ್ಗೆ ಯೋಜನೆಯ ಮೂಲಕ ತರಬೇತಿ ಪಡೆದುಕೊಂಡೆನು. ವಿಷಯ, ವಿಚಾರಸಂಪನ್ನನಾಗುವಂತೆ ನನ್ನಲ್ಲಿ ಸ್ಫೂರ್ತಿಯನ್ನು ಉಂಟುಮಾಡಿದೆ. ಇದರಿಂದ ನಾವು ಬಹಳ ಧೈರ್ಯದಿಂದ ಬೆರೆ ಬೇರೆ ಗುಂಪುಗಳಿಗೆ, ಶಿಕ್ಷಕರಿಗೆ, ಎಸ್‌ಡಿಎಂಸಿಯವರಿಗೆ, ಸ್ವಸಹಾಯ ಗುಂಪುಗಳಿಗೆ

ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಗಕುರಿತಾಗಿ ಮಾತ್ರವಲ್ಲದೆ ಕೃಷಿ, ಕೈತೋಟ ಇನ್ನಿತರ ಕುರಿತಾಗಿಯೂ ಜ್ಞಾನಾಭಿವೃದ್ಧಿ ಹೊಂದಿಕೊಂಡು ಅರಿವು, ಚರ್ಚೆ ಸಮಾಲೋಚನೆಗಳನ್ನು ನಡೆಸಲು ನನಗೆ ಸಾಧ್ಯವಾಗಿದೆ. ಇದರಿಂದ ನನ್ನ ಸ್ಥಾನಮಾನ ಹೆಚ್ಚಾದುದಲ್ಲದೆ, ಮಕ್ಕಳು, ರಕ್ಷಕರು, ಶಿಕ್ಷಕರುಗಳಿಗೆ ಸಲಹೆಗಾರರಾಗಲು ಮತ್ತು ಇಲಾಖೆಗಳೊಂದಿಗೆ ಸಂಪರ್ಕ ನಡೆಸಲು ಸಾಧ್ಯವಾಗಿದೆ. ಅಷ್ಟೇ ಮಾತ್ರವಲ್ಲದೆ ಇತರ ಸಂಘ ಸಂಸ್ಥೆಗಳೊಂದಿಗೆ ಸೇರಿ ಸಹಭಾಗಿತ್ವದೊಂದಿಗೆ ಸಮನಸ್ಕ ಕಾರ್ಯ ರೂಪಿಸಲು ಅವಕಾಶ ದೊರೆಯಿತು. ಇದು ಸ್ಥಳೀಯ ಮಟ್ಟದಿಂದ ಜಿಲ್ಲೆ, ರಾಜ್ಯ, ದೇಶದ ಮಟ್ಟದಲ್ಲಿ ಶಿಕ್ಷಣದಲ್ಲಿ, ಮಕ್ಕಳ ಹಕ್ಕು ಮತ್ತು ರಕ್ಷಣೆ ವಿಚಾರಗಳಲ್ಲಿ ನಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅನುಕೂಲವಾಯಿತು. ಬಹಳ ಆಸಕ್ತಿಕರ ಸಂದರ್ಶನ ಆಂಧ್ರದ ಮದನ ಪಳ್ಳಿಯ ಮಾದರಿ ಶಾಲೆ, ಪಾಂಡೀಚೇರಿಯ ಅರವಿಲೆ ಶಾಲೆಗಳಲ್ಲಿರುವ ಉತ್ತಮ ಅಂಶಗಳನ್ನು ಅರಿಯಲು ಅಲ್ಲಿಗೆ ಹೋಗಿ ಅವರೊಂದಿಗಿದ್ದು ತಿಳಿದುಕೊಳ್ಳಲು ಅನುಕೂಲವಾಯಿತು. ಹೀಗೆ ವೈಯಕ್ತಿಕ, ಸಾಂಘಿಕ ಸಾಮಾಜಿಕವಾಗಿ, ಸಂಪನ್ಮೂಲ ಕೇಂದ್ರದಲ್ಲಿ ಸದಸ್ಯನಾಗಿ, ಪದಾಧಿಕಾರಿಯಾಗಿ ಒಕ್ಕೂಟದ ಪದಾಧಿಕಾರಿಯಾಗಿ ಬೆಳೆಯುತ್ತಾ ಕ್ರಮಬದ್ಧ ಆಡಳಿತಾತ್ಮಕ ನೆಲೆಯಲ್ಲಿ ಒಂದು ಸಂಘಟನೆಯು ಹೇಗೆ ಮುಂದುವರಿಯಬೇಕು ಅನ್ನುವುದನ್ನು ತಿಳಿದುಕೊಳ್ಳಲು ಪಡಿ ಸಂಸ್ಥೆ ನಿರಂತರ ನನಗೆ ಸಹಾಯ, ಮಾರ್ಗದರ್ಶನಗಳನ್ನು ನೀಡುತ್ತಾ ತನ್ನ ಪರಿಕಲ್ಪನೆಯನ್ನು ಸಂಪನ್ಮೂಲ ಕೇಂದ್ರಗಳ ಸಹಬಾಗಿತ್ವದೊಂದಿಗೆ ವ್ಯಾಪಕವಾಗಿ ರಾಜ್ಯಮಟ್ಟಕ್ಕೆ ತಲುಪಿಸುವಲ್ಲಿ ಸಾಧ್ಯವಾಗಿಸಿದೆ. ಮುಖ್ಯವಾಗಿ ನ್ಯಾಯಯುತ, ಮಾನವೀಯ ಮೌಲ್ಯಗಳನ್ನೊಳಗೊಂಡ ಮಗುಸ್ನೇಹಿ ಸಮಾಜ ಅದರಲ್ಲೂ ಮುಖ್ಯವಾಗಿ ಮಕ್ಕಳ ಹಕ್ಕುಗಳು ಮತ್ತು ಅದರ ಸಂರಕ್ಷಣೆಯೊಂದಿಗೆ ಗುಣಮಟ್ಟದ ಶಿಕ್ಷಣವನ್ನು ಪ್ರತೀ ಮಗುವು ಹೊಂದಿಕೊಳ್ಳಬೇಕಾದ ನೆಲೆಯಲ್ಲಿ ಮಗುಸ್ನೇಹಿ ಮಾದರಿ ಶಾಲೆಗಳು, ಮಾದರಿ ಶಾಲಾಭಿವೃದ್ಧಿ ಸಮಿತಿಗಳು, ಮಾದರಿ ಪೋಷಕರು, ಮಾದರಿ ಪಂಚಾಯತ್‌ಗಳನ್ನು ಹುಟ್ಟು ಹಾಕುವಲ್ಲಿ ಪಡಿ–ವೆಲೊರೆಡ್ ಯೋಜನೆ ಯಶಸ್ವಿಯಾಗಿದೆ ಅನ್ನುವುದನ್ನು ಹೆಮ್ಮೆಯಿಂದ ಹೇಳಬಯಸುತ್ತೇನೆ, ಯಾಕಂದರೆ ನಾನೂ ಈ ಯೋಜನೆಯ ಒಂದು ಭಾಗವಾಗಿದ್ದೇನೆ.

*****

# ನಾನು ತಿಳಿದುಕೊಂಡದ್ದು ಮತ್ತು ಹೇಳ ಬಯಸುವುದು



**ನಾರಾಯಣ ಕಿಲಂಗೋಡಿ**
**ಸಂಪನ್ಮೂಲ ವ್ಯಕ್ತಿ, ಸುಳ್ಯ**

'ಪಡಿ ವೆಲೊರೆಡ್ ಮಂಗಳೂರು' ಹೆಸರು ನಾನು ಮೊದಲೇ ತಿಳಿದುಕೊಂಡಿದ್ದೆ. ಸಂಸ್ಥೆಯು ಸಮಾಜಮುಖಿ ಕೆಲಸ ಕಾರ್ಯಗಳ ಬಗ್ಗೆ ಅರಿವಿತ್ತು. ನಾನು ಬೇರೆ ಸಂಸ್ಥೆ, ಸಂಘಟನೆ, ತರಬೇತಿ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರೂ ಮಕ್ಕಳ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಹೆಚ್ಚು ಅರಿವನ್ನು ಹೊಂದಿರಲಿಲ್ಲ. ಸುಳ್ಯ ತಾಲೂಕಿನ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಭೆಯೊಂದನ್ನು ವೀಕ್ಷಣೆ ಮಾಡುವ ಅವಕಾಶವನ್ನು ಅಂದಿನ ಕೇಂದ್ರದ ಅಧ್ಯಕ್ಷರಾದ ಸುಳ್ಯಕೋಡಿ ಶ್ರೀ ಮಾಧವ ಗೌಡರು ಮತ್ತು ಕಾರ್ಯಕರ್ತೆ ಶ್ರೀಮತಿ ಜಯಾರವರು ಒದಗಿಸಿದಾಗ ಸಮಾಜ ಕಟ್ಟುವಿಕೆಯಲ್ಲಿ ಶಿಕ್ಷಣ ಮತ್ತು ಇಲಾಖೆ/ಸಮಾಜದ ಜವಾಬ್ದಾರಿ ಕುರಿತು ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಯಿತು. ಈ ವಿಚಾರಧಾರೆಗಳು ಹಾಗೂ ಈ ಸಂಸ್ಥೆಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುವ ಶ್ರೀ ರೆನ್ನಿ ಡಿ'ಸೋಜಾರವರು ಪರಿಚಿತರಾಗಿದ್ದು ಇವರ ವಿಚಾರಧಾರೆಗಳು, ಯೋಜನೆಗಳು ಸಂಸ್ಥೆಯ ಯೋಜನೆಯಲ್ಲಿ ಒಳಗೊಳ್ಳಲು ಅವಕಾಶ ಒದಗಿಸಿದ್ದು ನನಗೆ ಸಂತೋಷವಾಗಿದೆ.

ನನ್ನ ಚಿಂತನೆಗಳು ಪ್ರಬುದ್ಧ ಸಮಾಜ ರೂಪುಗೊಳ್ಳುವುದು ಆಗಿದೆ. ಸಾಮಾಜಿಕ ಪರಿವರ್ತನೆಗಳು ಸಾಕಷ್ಟು ಆಗಬೇಕಾಗಿದೆ. ಸ್ವಾತಂತ್ರ್ಯದ ಬಳಿಕ 70 ವರ್ಷಗಳ ಕಳೆದ ಬಳಿಕವೂ ನಮ್ಮ ಪ್ರಗತಿಯ ನಿಧಾನಗತಿಗೆ ಕಾರಣ ಶಿಕ್ಷಣ ಪದ್ಧತಿ ಮತ್ತು ಸಮಾಜದ ಜವಾಬ್ದಾರಿ ನಿರ್ವಹಣೆಯಲ್ಲಿನ ಲೋಪಗಳು ಎಂಬುದು ನನ್ನ ನಂಬಿಕೆ. ಇದನ್ನು ಯಾವ ರೀತಿಯಲ್ಲಿ ಪರಿಹರಿಸಬಹುದು ಎಂಬುದನ್ನು ಅರ್ಥೈಸಿಕೊಳ್ಳಲು ನನಗೆ ಸಾಹಿತ್ಯವನ್ನು ಒದಗಿಸಿದ್ದು 'ಪಡಿ' ಸಂಸ್ಥೆ. 86ನೆಯ ತಿದ್ದುಪಡಿ ಕಾಯಿದೆಯಲ್ಲಿ ಶಿಕ್ಷಣದ ಹಕ್ಕು ಮೂಲಭೂತ ಹಕ್ಕು ಎಂದು ಸೇರ್ಪಡೆಗೊಳಿಸಲಾಗಿದೆ. ಸಾಂವಿಧಾನಿಕ ಹಕ್ಕುಗಳು, ಅವಕಾಶಗಳು ನೀಡಲ್ಪಟ್ಟರೂ ಸಮಾಜದ ವ್ಯವಸ್ಥೆಗಳು, ತಾರತಮ್ಯತೆಗಳು, ಅಸಮಾನತೆಗಳು ಶಿಕ್ಷಣದ ಕೊರತೆ ನಮ್ಮ ಹಕ್ಕನ್ನು ತಿಳಿದುಕೊಳ್ಳಲಾಗದಷ್ಟು ಹಿಂದಕ್ಕೆ ತಳ್ಳಿರುವುದು ನಾನು ಗಮನಸಿದ್ದೇನೆ. 'ಪಡಿ' ಸಂಸ್ಥೆ ಯಾಕೆ ಇಷ್ಟವಾಗುತ್ತದೆ ಅಂದರೆ ಸಂಸ್ಥೆಯ ಚಿಂತನೆಗಳು ಯೋಜನೆಗಳ ಪರಿಕಲ್ಪನೆಗಳು– 'ಮಗುಸ್ನೇಹಿ ಸಮಾಜ', ಮಗುಸ್ನೇಹಿ ಶಾಲೆ' 'ಮಗುಸ್ನೇಹಿ ಪ್ರಂಚಾಯತ್'. ಏಕೆಂದರೆ ಒಂದು ಮಗು ಒಂದು ರಾಷ್ಟ್ರದ ಆಧಾರಸ್ತಂಭ ಮತ್ತು ರಾಷ್ಟ್ರದ ಸಂಪತ್ತು. ಇದರ ಅಭಿವೃದ್ಧಿಯಲ್ಲಿ

ರಾಷ್ಟ್ರದ ಏಳ್ಗೆ ಅಡಗಿದೆ ಎಂಬ ಅರಿವು ಸಂಸ್ಥೆಗಿದ್ದು ಈ ಜ್ಞಾನವನ್ನು ಸಮುದಾಯಕ್ಕೆ ಹರಡಲು ಶ್ರಮಿಸುತ್ತಿರುವುದು ಶ್ಲಾಘನೀಯ.

ಸಂಸ್ಥೆ ತನ್ನ ಕಾರ್ಯ ಯೋಜನೆಗಳ ಭಾಗಿದಾರರುಗಳಾದ ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿರುವ ಸದಸ್ಯರನ್ನು ಸಂಪನ್ಮೂಲಭರಿತರನ್ನಾಗಿಸಿ ಸಮುದಾಯದಲ್ಲಿ ಬದಲಾವಣೆಗಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ರೀತಿಯಲ್ಲಿ ಸಮಾಲೋಚಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ನಾನು ಪಡೆದುಕೊಂಡ ತರಬೇತುಗಳು ಮತ್ತು ವಿಚಾರಗಳು:–

ಸಾಂವಿಧಾನಿಕ ಆಶಯ ಮೌಲ್ಯಗಳಿಗನುಗುಣವಾಗಿ ಪ್ರಾಥಮಿಕ ಶಿಕ್ಷಣವನ್ನು ಅರ್ಥೈಸಿಕೊಳ್ಳುವುದು, ಸಹಭಾಗಿತ್ವ, ಸಮನ್ವಯತೆ, ಗುಣಮಟ್ಟದ ಶಿಕ್ಷಣ, ಮಗುಸ್ನೇಹಿ ಪಂಚಾಯತ್, ಮಗುಸ್ನೇಹಿ ಶಾಲೆ ಮತ್ತು ಕಾರ್ಯ ಯೋಜನೆಯ ಅನುಷ್ಠಾನವನ್ನು ಮೌಲ್ಯಮಾಪನ ಮಾಡುವ ಬಗ್ಗೆ, ಶಾಲಾ ಕುಂದುಕೊರತೆ ಅರ್ಥೈಸಿಕೊಳ್ಳುವುದು ಮತ್ತು ಅವುಗಳ ಬದಲಾವಣೆಗಳನ್ನು ಮೌಲ್ಯಮಾಪನ ಮಾಡುವುದು, ಲಿಂಗ ತಾರತಮ್ಯತೆ ಅರಿವು, ಪೋಕ್ಸೋ ಕಾಯಿದೆ, ಎಸ್‌ಡಿಎಂಸಿ ತರಬೇತಿ ಮತ್ತು ಎಸ್‌ಡಿಎಂಸಿಗಳ ಪ್ರಕಾರ್ಯಗಳನ್ನು ಮೌಲ್ಯಮಾಪನ ಮಾಡುವುದು, ಶಾಲಾಭಿವೃದ್ಧಿ ಯೋಜನೆ ತಯಾರಿ, ಆರ್.ಟಿ.ಇ. ಕಾಯಿದೆ, ಸಂಪನ್ಮೂಲ ಕೇಂದ್ರಗಳ ಬಲವರ್ಧನೆಗಾಗಿ ಆಡಳಿತಾತ್ಮಕ, ವಕಾಲತ್ತು ಹಾಗೂ ಆರ್ಥಿಕ ಕ್ರೋಢೀಕರಣಗಳ ಕುರಿತು, ಮಕ್ಕಳ ಹಕ್ಕುಗಳು ಮತ್ತು ರಕ್ಷಣೆ ಮತ್ತು ಸಹಾಯವಾಣಿ, ಮಕ್ಕಳ ಗ್ರಾಮ ಸಭೆ. ಈ ತರಬೇತಿಗಳಲ್ಲದೆ ಕಾಲಕಾಲಕ್ಕೆ ಯೋಜನಾ ಅನುಷ್ಠಾನದಲ್ಲಿ ಸಮುದಾಯ, ಇತರ ಸಂಘಸಂಸ್ಥೆಗಳು, ಇಲಾಖಾ ಹಾಗೂ ಪ್ರಾಧಿಕಾರಗಳೊಂದಿಗೆ ಚಿಂತನೆಗಳನ್ನು ನಡೆಸುವಲ್ಲಿ ಮಾಡುವ ಸಮಾಲೋಚನಾ ಕಾರ್ಯಾಗಾರಗಳು ನಿಜವಾಗಿಯೂ ನನ್ನನ್ನು ಹೀಗೇ ಹಲವಾರು ವಿಚಾರಗಳನ್ನು ತಿಳಿದುಕೊಂಡು ಶಾಲೆ ಪಂಚಾಯತ್‌ಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿ ನೀಡಲು ನನಗೆ ಸಾಧ್ಯವಾಗಿದೆ.



ನನ್ನ ಸಂಬಂಧಗಳು ಸಂಸ್ಥೆಯ ವಿಚಾರಗಳೊಂದಿಗೆ ಸೇರಿಕೊಂಡಿರುವುದು ನನ್ನ ಬೆಳವಣಿಗೆಗೆ ಸಹಕಾರಿಯಾಗಿದೆ. ಇಲಾಖೆಗಳಲ್ಲಿ ಸಂಸ್ಥೆಗಳಲ್ಲಿ ಸಮಾಜದಲ್ಲಿ ಗುರುತಿಸಲು ಅವಕಾಶ ಆಗಿದೆ. ತಾಲೂಕಿನಲ್ಲಿ ರಂಗ ತಂಡವನ್ನು ಅಭಿವೃದ್ಧಿ ಪಡಿಸಿ ಮಕ್ಕಳ ನೈಜ ಧ್ವನಿಯನ್ನು ಮಕ್ಕಳಿಂದಲೇ ಸಮಾಜಕ್ಕೆ ತಲುಪಿಸಲು ಮತ್ತು ಸಮಾಜವನ್ನು ಮಕ್ಕಳ ಶಿಕ್ಷಣ, ಮಕ್ಕಳ ರಕ್ಷಣೆ, ಮಕ್ಕಳ ಹಕ್ಕುಗಳ ಬಗ್ಗೆ ಯೋಚಿಸುವಂತೆ ಮಾಡಬಹುದು ಎಂಬುವುದು ದೃಡೀಕರಿಸಿದೆ. ಮಕ್ಕಳ ಹಕ್ಕುಗಳನ್ನು ದಮನಿಸದಂತೆ ಮಗುವಿನ ಗೌರವಕ್ಕೆ ದಕ್ಕೆಯಾಗದಂತೆ ನಾವು ಹೇಗೆ ಜವಾಬ್ದಾರಿ ನಿರ್ವಹಿಸಬೇಕಾಗಿದೆ ಎಂಬುದನ್ನು ಇಂದು ಎಲ್ಲಿಯೂ ಸಹ ಹೇಳಲೂ ಸಾಧ್ಯವಾಗಿದೆ.

ಇಲಾಖೆ/ಪಂಚಾಯತ್/ಎಸ್.ಡಿ.ಎ.ಸಿ/ಹೆತ್ತವರು/ಸಮಾಜ ಇವರೆಲ್ಲರ ಸಮನ್ವಯತೆ ಪ್ರಬುದ್ಧ ಸಮಾಜ ನಿರ್ಮಾಣದ ತಳಹದಿ ಈ ಮೂಲಕ ಶಿಕ್ಷಣ ವ್ಯವಸ್ಥೆಯನ್ನು ನಡೆಸಬೇಕು ಮಕ್ಕಳ ಹಕ್ಕಿನ ರಕ್ಷಣೆಯೊಂದಿಗೆ ಇದು ಸಾಧ್ಯವಾಗಬೇಕು ಎಂಬ ವಿವಾದದಲ್ಲಿ ನಾನು ನನ್ನೊಳಗಿನ ಅರಿವನ್ನು ವೃದ್ಧಿಸಿಕೊಂಡಿದ್ದೇನೆ. ಇದಲ್ಲದೇ ಆರ್ಥಿಕ ಕ್ರೋಢೀಕರಣಕ್ಕಾಗಿ ತಂತ್ರಗಾರಿಕೆ ಹಾಗೂ ಬೇರೆ ಬೇರೆ ವಿಧಾನಗಳು ಬಹಳ ಉಪಯುಕ್ತ ವಿಚಾರ ಸಹ ಪರಿಣಾಮಕಾರಿಯಾಗಿದೆ. ಬಾಲಪರಾದ ಕಾಯಿದೆ ಮೂಲಕ ಮಕ್ಕಳ ರಕ್ಷಣೆ ಹೇಗೆ ಅನ್ನುವುದನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಮತ್ತು ಸಮಾಜವನ್ನು ಮಕ್ಕಳ ಸುರಕ್ಷಾ ದೃಷ್ಠಿಯಿಂದ ನೋಡುವುದನ್ನು ಸಾಧ್ಯವಾಗಿದೆ.

ನನ್ನ ಜ್ಞಾನವನ್ನು ಒಬ್ಬ ತರಬೇತುದಾರನಾಗಿ ಸಮಾಜಕ್ಕೆ ನೀಡಲು ನಾನು ಸಿದ್ದನಿದ್ದೇನೆ. ಮತ್ತು ಆ ಕೆಲಸ ನಿರ್ವಹಿಸುತ್ತೇನೆ.

ಕೃತಜ್ಞತೆಗಳು 'ಪಡಿ' ಸಂಸ್ಥೆಗೆ ಮತ್ತು ಸಂಸ್ಥೆಯ ಸರ್ವ ಸಿಬ್ಬಂದಿ ವರ್ಗಕ್ಕೆ ಮಾತ್ರವಲ್ಲದೆ ಶಿಕ್ಷಣ ಸಂಪನ್ಮೂಲ ಕೇಂದ್ರದ ಸರ್ವಸದಸ್ಯರಿಗೆ. ನಿಮ್ಮೊಂದಿಗೆ ನಾನು ಸದಾ ಕೈ ಜೋಡಿಸುತ್ತಾ ಮಗುಸ್ನೇಹಿ ಸಮಾಜ ನಿರ್ಮಾಣದ ಪರಿಕಲ್ಪನೆಯನ್ನು ದೇಶ ದುದ್ದಕ್ಕೂ ಹರಡಿಸುವ ಎಂಬ ಆಶಯದೊಂದಿಗೆ.



ವಂದನೆಗಳು.

****

## ಮಗುಸ್ನೇಹಿ ಸಮುದಾಯದ ಪರಿಕಲ್ಪನೆಯೊಳಗೆ ಪಾರಂಪರಿಕ ವೈದ್ಯರು

ನಾಟಿ ವೈದ್ಯ ಸೇವೆ ನಮ್ಮ ಮನೆತನದ ಹೆಗ್ಗುರುತು. ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಸುಳ್ಯ ಕೋಡಿ ಎಂಬಲ್ಲಿ ವಾಸ್ತವವಿದ್ದ ದಿ। ರಾಮಪ್ಪ ಗೌಡ ಮತ್ತು ಶ್ರೀಮತಿ ದೇವಮ್ಮರವರ ಪ್ರಥಮ ಪುತ್ರ 9 ಮಕ್ಕಳಲ್ಲಿ ಹಿರಿಯವನಾಗಿದ್ದು 8ನೇ ತರಗತಿಯ ಶಿಕ್ಷಣವನ್ನು ಪಡೆದು ಕೃಷಿಯೊಂದಿಗೆ ಹಿರಿಯ ಪಾರಂಪರಿಕ ವೈದ್ಯಕೀಂಯುವನ್ನು ಮುಂದುವರೆಸಿಕೊಂಡು ಬರುತ್ತಿದ್ದೇನೆ.



**ಸುಳ್ಯಕೋಡಿ ಶ್ರೀ ಮಾಧವ ಗೌಡ**
**ಶಿಕ್ಷಣ ಸಂಪನ್ಮೂಲ ಕೇಂದ್ರ, ಸುಳ್ಯ**

ಜೀವನ ನಿರ್ವಹಣೆಗೆ ಕೃಷಿ ಅವಲಂಬಿಸಿ ಮತ್ತು ನಾಟಿ ವೈದ್ಯವನ್ನು ಸಾಮಾಜಿಕ ಸೇವೆ ರೂಪದಲ್ಲಿ ನಡೆಸಿಕೊಂಡು ಬರುತ್ತಿದ್ದೇನೆ. ಹೆಚ್ಚು ಶಿಕ್ಷಣ ಪಡೆಯದ ಬಗ್ಗೆ ಕೊರತೆ ನನ್ನನ್ನು ಕಾಡುತ್ತಿತ್ತು. ಏಕೆಂದರೆ ಈಗಿನ ಕಾಲಸ್ಥಿತಿಯಲ್ಲಿ ಶಾಲಾ ಮಕ್ಕಳು/ ಮಕ್ಕಳು ಅನುಭವಿಸುವ ಹಲವಾರು ಸಮಸ್ಯೆಗಳು ಸಮಾಜದಲ್ಲಿನ ವ್ಯವಸ್ಥೆಗಳು ಮಕ್ಕಳ ಮೇಲೆ ಬೀರುತ್ತಿರುವ ಪರಿಣಾಮಗಳ ಬಗ್ಗೆ ಹೆಚ್ಚು ಯೋಚಿಸುತ್ತಿದ್ದೆ. ಈ ಸಮಯದಲ್ಲಿ 2008-09ನೇ ಅವಧಿಯಲ್ಲಿ 'ಪಡಿ' ಸಂಸ್ಥೆಯ ಕಾರ್ಯಕರ್ತರು ತಾಲೂಕು ಮಟ್ಟದಲ್ಲಿ ಶಿಕ್ಷಣಾಭಿಮಾನಿಗಳು, ಎಸ್.ಡಿ.ಎಂ.ಸಿ.ಯ ಸಭೆ ಕರೆದು, ಸಂವಿಧಾನದ ಆಶಯದಂತೆ ಸಮಾಜ ಕಟ್ಟುವ ಕನಸಿಗೆ ಪೂರಕವಾಗಿ ಜಾತ್ಯಾತೀತ, ಪ್ರಜಾಪ್ರಭುತ್ವ, ಮತ್ತು ನ್ಯಾಯಯುತ ಸಮಾಜ ಕಟ್ಟುವ ಕನಸಿಗೆ ಪೂರಕವಾಗಿ ಜಾತ್ಯಾತೀತ, ಪ್ರಜಾಪ್ರಭುತ್ವ ಮತ್ತು ನ್ಯಾಯಯುತ ಸಮಾಜ ಕಟ್ಟುವ ವಿಚಾರಗಳ ಬಗ್ಗೆ ವಿನಿಮಯದ ಸಂದರ್ಭದಲ್ಲಿ ನಾನು 'ಪಡಿ' ಸಂಸ್ಥೆಯ ವಿಚಾರಗಳೊಂದಿಗೆ ನನ್ನನ್ನು ನಾನು ಸೇರ್ಪಡೆಗೊಳಿಸಲು ಅವಕಾಶವಾಯಿತು. ಮತ್ತು ಅದು ನನ್ನ ಹಲವಾರು ವಿಚಾರಗಳಿಗೆ ಪೋಷಣೆಯನ್ನು ನೀಡಿತು.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಶಾಲೆಗಳ ಅಭಿವೃದ್ಧಿ ಮಕ್ಕಳ ರಕ್ಷಣೆ, ಹಕ್ಕುಗಳ ವಿಚಾರವಾಗಿ ಬಹುತೇಕ ನಿರ್ಧಾರಗಳು, ಪಂಚಾಯತ್ ಅಥವಾ ಕೆಲವು ಪ್ರಭಾವಿ ವ್ಯಕ್ತಿ ಆಧರಿತವಾಗಿ ತೀರ್ಮಾನಸಲ್ಪಡುತ್ತಿದ್ದವು. ಎಸ್.ಡಿ.ಎಂ.ಸಿ. ಗೆ ಇರುವ ಹಕ್ಕುಗಳು ಮತ್ತು ತಮ್ಮ ಜವಾಬ್ದಾರಿಯ ನಿರ್ವಹಣೆ ಬಗ್ಗೆ ದೃಢತೆ ಬಹಳಷ್ಟು ಇರಲಿಲ್ಲ.

ಮುಖ್ಯ ಅದ್ಯಾಪಕರು ನಿಯಂತ್ರಕರಂತೆ ಕಂಡುಬರುವುದು ಸಾಮಾನ್ಯವಾಗಿತ್ತು. ಪೋಷಕರು ಹೆತ್ತವರಲ್ಲಿ ತಾವು ಏನು ಮಾಡಲು ಸಾಧ್ಯವಿದೆ ಎಂಬ ಅರಿವು ಇರಲಿಲ್ಲ. ಸಮಾಜದ ಪರಿವರ್ತನೆ ಅಂದರೆ ಅದು ತಳಮಟ್ಟದಿಂದಲೇ ಆಗಬೇಕು, ಹಾಗಾಗಬೇಕಿದ್ದರೆ, ನಾವು ಜವಾಬ್ದಾರರಾಗಿ ಶಾಲಾಭಿವೃದ್ದಿಯಲ್ಲಿ ನಮ್ಮ ಅಭಿಪ್ರಾಯ ನೀಡಿ ತೊಡಗಿಸಿಕೊಳ್ಳುವಂತಾಗಬೇಕು ಎಂಬ ಸರಳ ಮತ್ತು ಕ್ಲಿಷ್ಟಕರವಾದ ವಿಚಾರಗಳನ್ನು ಸವಾಲಾಗಿ ಸ್ವೀಕರಿಸಿದವರಲ್ಲಿ ನಮ್ಮ ಈ ತಂಡದ ಸದಸ್ಯರಲ್ಲಿ ನಾನು ಒಬ್ಬನಾಗಿದ್ದೆ.

ಮೌಲ್ಯಾಧಾರಿತ ಶಿಕ್ಷಣ ಅಭಿವೃದ್ಧಿಗೆ ತಳಹದಿ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ತಾಲೂಕಿನಲ್ಲಿ ಸಮಾಜ ಮತ್ತು ಶಿಕ್ಷಣ ಈ ವ್ಯವಸ್ಥೆಯಲ್ಲಿ ಶಿಕ್ಷಣ ವಂಚಿತ ಮಕ್ಕಳು ಶಾಲೆ ಬಿಡುವ ಮಕ್ಕಳು, ಬಡತನ ಸಾಮಾಜಿಕ ಅನಿಷ್ಠಗಳು ಎಲ್ಲವೂ ನನ್ನ ಕಣ್ಣೆದುರು ತೆರೆದುಕೊಳ್ಳುತ್ತಿತ್ತು. ಇದನ್ನು ಹೋಗಲಾಡಿಸಲು ನಮ್ಮಿಂದಾದ ಪ್ರಯತ್ನ ಮಾಡಲು ಪ್ರಥಮ ಹಂತದಲ್ಲಿ 2008–09–10ನೇ ಅವಧಿಯಲ್ಲಿ ಸಾಕಷ್ಟು ಪ್ರಯತ್ನಿಸಿದೆವು. ಶಾಲಾ ಎಸ್‌ಡಿಎಂಸಿ ಗೆ ತರಬೇತಿ ನೀಡಿದೆವು. ಎಸ್‌ಡಿಎಂಸಿಗಳ ಹೊಣೆಗಾರಿಕೆ ಮತ್ತು ಹಕ್ಕುಗಳ ಮಾಹಿತಿ ನೀಡಿ ಜಾಗೃತಿ ಮೂಡಿಸಿದೆವು. ಇದಕ್ಕಾಗಿ ನಮಗೆ ಶಿಕ್ಷಣ ಇಲಾಖೆ ದೊಡ್ಡ ಸ್ಪಂದನೆ ನೀಡದಿದ್ದರೂ ದೂರ ಮಾಡಲಿಲ್ಲ. ಅಷ್ಟಕ್ಕೆ ನಾವು ನೆಮ್ಮದಿಯಿಂದ ಕಾರ್ಯ ನಿರ್ವಹಿಸುವಂತಾಯಿತು.

2010–11ರಿಂದ 2012ರ ಅವಧಿ ಮತ್ತು 2015–16 ಮತ್ತು 17ರ ಅವಧಿಗೆ ನಾನು ಶಿಕ್ಷಣ ಸಂಪನ್ಮೂಲ ಕೇಂದ್ರ ಸುಳ್ಯ ತಾಲೂಕು ಸಮಿತಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಅವಕಾಶ ನನಗೆ ಒದಗಿತು. ಈ ಎಲ್ಲ ಅವಧಿಯಲ್ಲಿ ನನಗೆ 'ಪಡಿ' ಸಂಸ್ಥೆಯಿಂದ ಮೌಲ್ಯಾಧಾರಿತ ತರಬೇತುಗಳು ಲಭ್ಯವಾಗಿರುವುದು ನನ್ನ ಜ್ಞಾನದಾಹಕ್ಕೆ ಒದಗಿಸಿದ ಪೌಷ್ಠಿಕ ಆಹಾರವಾಗಿದೆ. ಅದರಲ್ಲಿ ಮುಖ್ಯವಾಗಿ

- ♦ ಮಕ್ಕಳ ಹಕ್ಕುಗಳು – ರಕ್ಷಣಾ ವ್ಯವಸ್ಥೆಗಳು
- ♦ ಸಮುದಾಯದ ಸಹಭಾಗಿತ್ವದಲ್ಲಿ ಶಾಲಾಭಿವೃದ್ಧಿ
- ♦ ಮಗುಸ್ನೇಹಿ ಶಾಲೆ
- ♦ ಎಸ್.ಡಿ.ಎಂ.ಸಿ. ಹಕ್ಕುಗಳು ಜವಾಬ್ದಾರಿಗಳು ಮತ್ತು ಸಬಲೀಕರಣ
- ♦ ಕಡ್ಡಾಯ ಶಿಕ್ಷಣ ಮಾಹಿತಿ
- ♦ ಪೋಕ್ಸೋ ಕಾಯಿದೆ
- ♦ ಬಾಲ ನ್ಯಾಯಿಕ ಕಾಯಿದೆ.
- ♦ ಆರ್.ಟಿ.ಇ. ಕಾಯಿದೆ –ಮಕ್ಕಳ ಉಚಿತ ಕಡ್ಡಾಯ ಶಿಕ್ಷಣ ಮಾಹಿತಿ
- ♦ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತ್
- ♦ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ

♦ ಮಕ್ಕಳ ಕಲಿಕಾ ಮೌಲ್ಯಮಾಪನ ♦ ಬಾಲ ಕಾರ್ಮಿಕತೆ
♦ ಲಿಂಗ ಸಮಾನತೆ–ಹೆಚ್.ಐ.ವಿ. ಮಾಹಿತಿ ♦ ಅಸರ್ ಸಮೀಕ್ಷೆ

ಹೀಗೆ ಮಕ್ಕಳ ಶಿಕ್ಷಣ ಮತ್ತು ರಕ್ಷಣೆಗೆ ಸಂಬಂಧಿಸಿದ ಮಾಹಿತಿಯನ್ನು ನಾನು ಪಡೆಯುವಂತಾಯಿತು. ನಮ್ಮ ತಾಲೂಕಿನಲ್ಲಿ ಕನಕಮಜಲು, ಜಾಲ್ಸೂರು, ಉಬರಡ್ಕ, ಸೋಣಂಗೇರಿ, ಕಲ್ಮಕಾರು, ಕೊಲ್ಲಮೊಗ್ರ, ಮಡಪ್ಪಾಡಿ, ಗುತ್ತಿಗಾರು ಮೊದಲಾದ ಶಾಲೆಗಳಿಗೆ ಮಾಹಿತಿ ಕಾರ್ಯಕ್ರಮ ನೀಡಿ ಎಸ್.ಡಿ.ಎಂ.ಸಿ. ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದು ಈಗ ಆಗಿರುವ ಹಲವಾರು ಶೈಕ್ಷಣಿಕ ಬದಲಾವಣೆಗೆ ಚಿಕ್ಕ ತಳಹದಿಯಾಗಿರಬಹುದು ಎಂಬ ನನ್ನ ನಂಬಿಕೆ.

2015–16 ಮತ್ತು 17ರ 3 ವರ್ಷ ಅವಧಿಗೆ ಜಿಲ್ಲಾ ಒಕ್ಕೂಟದ ಸಮಿತಿಗೆ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಜವಾಬ್ದಾರಿ ನೀಡಿದಾಗ ಒಪ್ಪಿಕೊಳ್ಳಲು ಆತಂಕವಾದರೂ ಸಂಸ್ಥೆಯ ಸಹಕಾರದೊಂದಿಗೆ ಜವಾಬ್ದಾರಿ ನಿರ್ವಹಣೆ ಮಾಡಿದ್ದೇನೆ. ಸಂಸ್ಥೆಯ ಸಹಕಾರದೊಂದಿಗೆ ಮಾಹಿತಿ ಕಾರ್ಯಗಾರಗಳು, ತರಬೇತಿಗಳು, ಇಲಾಖೆಗಳ ಜೊತೆ ಸಮನ್ವಯತೆ, ತಾಲೂಕು ಸಮಿತಿಗಳ ಕಾರ್ಯಕ್ರಮಗಳು, ಸಭೆಗಳು ನಿರಂತರವಾಗಿ ನಡೆಯುವಲ್ಲಿ ನನ್ನ ಜವಾಬ್ದಾರಿ ನಿರ್ವಹಿಸಿದ ತೃಪ್ತಿ ನನಗಿದೆ.

2008ರಿಂದ ಆರಂಭಗೊಂಡು 2020ರ ಈ ವರೆಗಿನ ನನ್ನ ಅನುಭವಗಳು 'ಪಡಿ' ಸಂಸ್ಥೆಯೊಂದಿಗೆ ಉತ್ತಮ ಸಂಬಂಧವನ್ನು ದೃಡಪಡಿಸಿದೆ. ಮಕ್ಕಳ ಹಕ್ಕುಗಳ ಅರಿವು, ಮಕ್ಕಳೊಂದಿಗೆ ಮಕ್ಕಳ ಪಾರ್ಲಿಮೆಂಟ್ (ಬೆಂಗಳೂರು) ಭಾಗವಹಿಸಿ ಮತ್ತು ಅದರ ಮಹತ್ವದ ಅರಿವು ನನಗಿದೆ. ಉನ್ನತ ಸಮಾಜ ಕಟ್ಟುವಲ್ಲಿ ಸಮಾಜ/ಸಮುದಾಯ/ಹೆತ್ತವರ ಜವಾಬ್ದಾರಿಗಳೇನು ಎಂಬ ಅರಿವು ನನಗಾಗಿದೆ. ಈ ಎಲ್ಲಾ ವಿಚಾರಗಳನ್ನು ಸಮುದಾಯದಲ್ಲಿ ಶಾಲೆಗಳಲ್ಲಿ, ಮಾಹಿತಿ ನೀಡಿ ಪಸರಿಸಲು ನನ್ನಿಂದ ಸಾಧ್ಯ ಎಂಬ ತೃಪ್ತಿ ನನಗಿದೆ. ಮತ್ತು ಅದನ್ನು ಮಾಡಲು ನಾನು ಬಯಸುತ್ತೇನೆ. 'ಮಗು ರಾಷ್ಟ್ರದ ಸಂಪತ್ತು' ಮಕ್ಕಳ ಸಬಲೀಕರಣ ಎಂದರೆ ದೃಢ ರಾಷ್ಟ್ರ ಕಟ್ಟುವುದು ಎಂದು ನಾನು ಭಾವಿಸುತ್ತೇನೆ, ಈ ಅರಿವು ನನ್ನಲ್ಲಿ ದೃಢವಾಗಲು ನನಗೆ ಜ್ಞಾನ ಒದಗಿಸಿದ ಪಡಿ ಸಂಸ್ಥೆ ಮಂಗಳೂರು ಮತ್ತು ಸಂಸ್ಥೆ ನಿರ್ದೇಶಕರಾದ ರೆನ್ನಿ ಡಿ'ಸೋಜ ಹಾಗೂ ಪಡಿ ಸಿಬ್ಬಂದಿಗೆ ಇವರಿಗೆ ನಾನು ಕೃತಜ್ಞನಾಗಿದ್ದೇನೆ. ಮೌಲ್ಯಾಧಾರಿತ ಸಮಾಜ ನಿರ್ಮಾಣದ ಕನಸು ಮತ್ತು ಜವಾಬ್ದಾರಿ ನಮ್ಮದು. ಇದನ್ನು ನಿರ್ವಹಿಸುವಲ್ಲಿ ಸಂಸ್ಥೆಯೊಂದಿಗೆ ನಾನು ಜೊತೆಗಿರಲು ಸಂತೋಷ ಪಡುತ್ತೇನೆ, ಮತ್ತು ಇದು ನನ್ನ ನಿರ್ಧಾರವಾಗಿದೆ. ಸಂಸ್ಥೆಯಿಂದ ಪ್ರಕಟವಾದ 'ಕಣಜ' ಪುಸ್ತಕ ಪ್ರಕಟಣೆ ನಮ್ಮ ಸಾಧನೆಯ ಹೆಗ್ಗುರುತಾಗಿದೆ.

*****

## ಸಮಾಜದಲ್ಲಿ ಸೇವೆ ಮಾಡಲು ಕಾತುರನಾದ ನನಗೆ ಸಿಕ್ಕಿದ ಸುವರ್ಣಾವಕಾಶ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕಂದಾವರ ಗ್ರಾಮ ಸಟ್ವಾಡಿ ಎಂಬಲ್ಲಿ ವಾಸವಿದ್ದು, ವಿದ್ಯಾಭ್ಯಾಸದ ನಂತರ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ಪ್ರಾರಂಭ ಮಾಡಲಾಯಿತು. ನಾನು ನನ್ನ ಕೆಲಸ ಎಂಬಂತಿರುವಾಗ ಬಾಲ್ಯದಿಂದಲೇ ಸಮಾಜಕ್ಕಾಗಿ ಸಮಾಜದೊಂದಿಗೆ ಏನಾದರೂ ಕೈಲಾದಷ್ಟು ಸಹಾಯ ಮಾಡಬೇಕು ಎನ್ನುವುದು ಮಹಾದಾಸೆ ಕಾಡುತ್ತಿತ್ತು, ಅನಿರೀಕ್ಷಿತವಾಗಿ ಕುಂದಾಪುರದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯನಾಗುವ ಅವಕಾಶ ದೊರೆಯಿತು. ಪಡಿ–ವೆಲೊರೆಡ್ ಮಾರ್ಗದರ್ಶನದಲ್ಲಿ ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ಶೈಕ್ಷಣಿಕ, ಸಾಮಾಜಿಕ, ತಳಮಟ್ಟದ ವರ್ಗದ ಜನರೊಂದಿಗೆ ಕೆಲಸ ಮಾಡುತ್ತಿರುವ ಸಂಸ್ಥೆಯ ಬಗ್ಗೆ ಸಂಪೂರ್ಣ ತಿಳಿದುಕೊಳ್ಳುವ ಅವಕಾಶ ದೊರೆಯಿತು ಮತ್ತು ನನ್ನನ್ನು ಸಮಾಜಮುಖಿಯಾಗಿ ತೊಡಗಿಸಿಕೊಳ್ಳಲು ಪಡಿ–ವೆಲೊರೆಡ್, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಸಹಕಾರಿಯಾಯಿತು.



**ಎಸ್. ವಿ. ನಾಗರಾಜ್**
**ಕಾರ್ಯದರ್ಶಿ**
**ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ.)**
**ಉಡುಪಿ**

ಸಾಮಾನ್ಯ ಸದಸ್ಯನಾಗಿ ಸೇರಿಕೊಂಡ ನಂತರ ಸಂಸ್ಥೆಯು ಪ್ರತಿಯೊಂದು ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಣೆ ದೊರೆಯಿತು. ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಮರುಸೇರ್ಪಡೆ, ಶಾಲಾ ಕಾಲೇಜುಗಳಲ್ಲಿ ಸಂಸ್ಥೆ ನಡೆಸುತ್ತಿರುವ ಮಕ್ಕಳ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಯುವ ಮಾಹಿತಿ ಕಾರ್ಯಕ್ರಮ, ತಳವರ್ಗದ ಜನರೊಂದಿಗೆ ಆರೋಗ್ಯ, ರಕ್ಷಣೆ, ಶಿಕ್ಷಣ ಮುಂತಾದ ಮಾಹಿತಿ ಕಾರ್ಯಗಾರದಲ್ಲಿ ನಿರಂತರ ಭಾಗವಹಿಸಿ ಕಾರ್ಯ ನಿರ್ವಹಿಸಲು ಅವಕಾಶ ದೊರೆಯಿತು.

ಯೋಜನೆಯು ನನ್ನಲಿರುವ ನಾಯಕತ್ವ ಗುಣವನ್ನು ಗುರುತಿಸಿ, ಸಂಪನ್ಮೂಲ ವ್ಯಕ್ತಿಯಾಗಿ ನನಗೆ ಮತ್ತು ಇನ್ನೂ ಹಲವರಿಗೆ ವಿಶೇಷವಾದ ತರಬೇತಿಗಳನ್ನು ನೀಡಿತು. ಇದರ ಫಲವಾಗಿ ಉಡುಪಿ ಜಿಲ್ಲೆಯ 3 ತಾಲೂಕುಗಳಲ್ಲಿ ಎಸ್.ಡಿ.ಎಮ್.ಸಿ

ಸದಸ್ಯರನ್ನು ಸಂಘಟಿಸಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ ಎಸ್‌ಡಿಎಮ್‌ಸಿ ಮತ್ತು ಪೋಷಕರ ಪಾತ್ರ ಬಹಳ ಮುಖ್ಯ ಎನ್ನುವುದನ್ನು ಸಮುದಾಯಕ್ಕೆ ತಿಳಿಸುವಂತೆ ಆಯಿತು.

ಪಡಿ ಸಂಸ್ಥೆಯು ನೀಡಿದ ತರಬೇತಿಯಿಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್‌ಡಿಎಮ್‌ಸಿ ಅಧ್ಯಕ್ಷನಾಗುವ ಅವಕಾಶ ದೊರೆಯಿತು. ಶಿಕ್ಷಣದ ಮಟ್ಟ ಅಳೆಯುವ ಅಸರ್ ಸರ್ವೇ, ಆರೋಗ್ಯ ಮಟ್ಟ ಅಳೆಯುವ ಅಸರ್ ಹೆಲ್ತ್ ಸರ್ವೇಯಲ್ಲಿ ಭಾಗವಹಿಸಿರುತ್ತೇನೆ. ಸರಕಾರಿ ಶಾಲೆ ಸಬಲೀಕರಣದಲ್ಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ತರಬೇತಿ, ಮಕ್ಕಳ ಹಕ್ಕಿನ ಗ್ರಾಮ ಸಭೆಗೆ ಮಕ್ಕಳ ಮಿತ್ರನಾಗಿ, ಸರಕಾರದ ವಿವಿಧ ಯೋಜನೆಗಳ ಮಾಹಿತಿ ತಿಳಿಸುವ ಮಾಹಿತಿದಾರನಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿಕಾರನಾಗಿ, ಉದ್ಯೋಗ ಮಿತ್ರನಾಗಿ, ಸಾಮಾಜಿಕ ಪರಿಶೋಧಕನಾಗಿ ತೊಡಗಿಸಿಕೊಳ್ಳಲು ಪಡಿ ಸಂಸ್ಥೆ, ಶಿಕ್ಷಣ ಸಂಪನ್ಮೂಲ ಕೇಂದ್ರಗಳು ನೀಡಿದ ಮಾಹಿತಿ, ತರಬೇತಿಗಳು ಸಹಕಾರಿಯಾಯಿತು. ಆರ್‌ಟಿಇ ಪ್ರಮೋಟರ್ ಆಗಿ ಕೂಡಾ ಗುರುತಿಸಿ ಬೇರೆ ಜಿಲ್ಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನ ನೆಲೆಯಲ್ಲಿ ಮಾಹಿತಿ ಕಾರ್ಯಾಗಾರವನ್ನು ತರಬೇತುದಾರನಾಗಿ ನಿರ್ವಹಿಸಲು ಸಾಧ್ಯವಾಗಿದೆ. ಪ್ರಸ್ತುತ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ ಕುಂದಾಪುರ ಇದರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಅವಕಾಶ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಅವಕಾಶ ದೊರೆಯಿತು.

ಪಡಿ ವೆಲೊರೆಡ್ ಯೋಜನೆಯು ಮೌಲ್ಯಯುತ ಹಾಗೂ ಗುಣಮಟ್ಟದ ಶಿಕ್ಷಣ, ಮಗುಸ್ನೇಹಿ ಸಮುದಾಯದ ನಿರ್ಮಾಣಕ್ಕಾಗಿ ವಿಬಿನ್ನ ಚಿಂತನೆಗಳನ್ನು ಮಾಡಲು ಶಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಸಮುದಾಯದಲ್ಲಿ ಬೆಳೆಸುತ್ತಾ ರಾಜ್ಯಮಟ್ಟದವರೆಗೂ ಮೊತೊಯನ್ನು ಹಬ್ಬಿಸಿ, ಸಮುದಾಯವು ಅರಿವಿನತ್ತ ಸಾಗಿ ಬದಲಾವಣೆಯನ್ನು ತರಲು ಸಾಧ್ಯ ಎಂಬುದನ್ನು ಮನಗಾಣಿಸಿದ್ದಾರೆ. ನಾನು ಈ ಅನುಭವವನ್ನು ಹೊಂದಿರುತ್ತೇನೆ ಅದಕ್ಕಾಗಿ ಪಡಿ ವೆಲೊರೆಡ್ ಯೋಜನೆಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

*****

# ಶಿಕ್ಷಣ ಸಂಪನ್ಮೂಲ ಕೇಂದ್ರ ನಾನು ಕಂಡಂತೆ



**ವಾಸು ಆಚಾರ್**
**ಜೊತೆ ಕಾರ್ಯದರ್ಶಿ**
**ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ, ಉಡುಪಿ**

1994ರಲ್ಲಿ ಹೆಜಮಾಡಿ ಸರಕಾರಿ ಹಿ.ಪ್ರಾ.. ಶಾಲೆಯಲ್ಲಿ ಒಂದು ಸಭೆ ನಡೆಯಿತು. ಅಂದು ಸ್ಥಳೀಯರು, ಶಿಕ್ಷಕರು ಹಾಗೂ ಮಂಗಳೂರು ಪಡಿ ಸಂಸ್ಥೆಯ ಜಂಟಿ ಆಶ್ರಯದಲ್ಲಿ ಉಡುಪಿ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರದ ಆರಂಭ. ಇದಕ್ಕೆ ಪ್ರೋತ್ಸಾಹ ನೀಡಿದವರು ಸದ್ರಿ ಶಾಲಾ ಶಿಕ್ಷಕರು ಈ ಶಾಲಾ ಒಂದು ಕೊಠಡಿಯಲ್ಲಿ ಸಂಪನ್ಮೂಲ ಕೇಂದ್ರದ ಕಾರ್ಯಾಲಯವು ಸ್ಥಾಪನೆಯಾಯಿತು.

ಪ್ರಾರಂಭದ ದಿನಗಳಲ್ಲಿ ಶಿಕ್ಷಕರಿಗೆ ಚಟುವಟಿಕೆಗಳ ಮೂಲಕ ಪಾಠ ಬೋಧಿಸಲು ತರಬೇತಿ ನೀಡಲಾಯಿತು. ಪ್ರತಿಯೊಂದು ಶಾಲಾ ಓರ್ವ ಶಿಕ್ಷಕರು ತರಬೇತಿಯಲ್ಲಿ ಭಾಗವಹಿಸುವ ವ್ಯವಸ್ಥೆ. ಆ ಬಳಿಕ ವಿದ್ಯಾರ್ಥಿಗಳಿಗೆ ಚಟುವಟಿಕೆ ಕಾರ್ಯಗಾರ ಜರಗಿತು. ಒಟ್ಟಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯಾಗುವಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರವು ಪ್ರಮುಖ ಪಾತ್ರವಹಿಸಿತು. ನಂತರದ ದಿನಗಳಲ್ಲಿ ಇಲಾಖೆಗಳೇ ಅಲ್ಲಲ್ಲಿ ಕಲಿಕೋಪಕರಣಗಳನ್ನು ತಯಾರಿಸಲು ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿತು. ಮುಂದೆ ಎಲ್ಲಾ ವಿಷಯ ಶಿಕ್ಷಕರು ತಮ್ಮ ಪಠ್ಯ ಬೋಧನೆಯನ್ನು ಚಟುವಟಿಕೆ ಮೂಲಕವೇ ಬೋಧಿಸುವ ಪ್ರಕ್ರಿಯೆ ಆರಂಭವಾಯಿತು. ಕಲಿಕೆಯಲ್ಲಿ ಹಿಂದುಳಿದ ಮಗು ಚಟುವಟಿಕೆ ಮಾಡುವುದರ ಮೂಲಕ ಕಲಿಕೆಯಲ್ಲಿ ಮುಂದೆ ಬರುವಂತಾಯಿತು.

ಕೇಂದ್ರ ಸರಕಾರವು ಶಿಕ್ಷಣ ಹಕ್ಕು ಕಾಯಿದೆಯನ್ನು ಜಾರಿಗೊಳಿಸಿ, ಬಾಲಕಾರ್ಮಿಕ ಹಾಗೂ ಶಿಕ್ಷಣ ವಂಚಿತ ಮಕ್ಕಳ ಪಾಲಿಗೆ ಸಹಕರಿಸಿತು. ಇದರ ಸಮರ್ಪಕ ಅನುಷ್ಠಾನಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯ ಕೋಶ ರಚನೆಯಾಯಿತು. ಸರ್ವ ಶಿಕ್ಷಣ ಅಭಿಯಾನ ಯೋಜನೆಯಂತೆ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಶಿಕ್ಷಣ ಹಕ್ಕು ಕಾಯ್ದೆಯು ಸಹಕಾರಿಯಾಯಿತು.

ಸಂಪನ್ಮೂಲ ಕೇಂದ್ರವು ಉಡುಪಿಯಲ್ಲಿ ಕಛೇರಿಯನ್ನು ಹೊಂದಿ ಉಡುಪಿ, ಕುಂದಾಪುರ–ಬೈಂದೂರು, ಕಾರ್ಕಳ ತಾಲೂಕುಗಳಲ್ಲಿ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಾಯಿತು. ಇದೇ ರೀತಿ ಮಂಗಳೂರು ದ.ಕ. ಜಿಲ್ಲೆಯಲ್ಲಿಯೂ

ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ ಸ್ಥಾಪನೆಯಾಯಿತು. ಹೀಗೆ ಎರಡು ಜಿಲ್ಲೆಗಳಲ್ಲಿ ಉತ್ತಮ ಕಾರ್ಯಕ್ರಮಗಳು ಜರಗಿವೆ.

ಬೃಹತ್ ಜನಾಂದೋಲನದಲ್ಲಿ ಮಕ್ಕಳು, ಮಕ್ಕಳ ಹಕ್ಕುಗಳ ಸಂಘಸಂಸ್ಥೆಗಳು, ಶಿಕ್ಷಕರು, ಪಾಲಕರು, ಎಸ್.ಡಿ.ಎಮ್.ಸಿ ಸದಸ್ಯರು, ದಲಿತ ಚಳುವಳಿ. ವಿದ್ಯಾರ್ಥಿ ಯುವಜನ ಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸರ್ಕಾರೇತರ ಸಂಘಸಂಸ್ಥೆ ಪದಾಧಿಕಾರಿಗಳು, ಮಾಧ್ಯಮದವರು ಹಾಗೂ ನಾಡಿನ ಸಮಸ್ತ ಜನತೆ ಸಕ್ರಿಯವಾಗಿ ಭಾಗವಹಿಸುವಂತೆ ವ್ಯಾಪಕವಾಯ್ತು.

ಸಂಪನ್ಮೂಲ ಕೇಂದ್ರ ಉಡುಪಿಯ ಸಕ್ರಿಯ ಸದಸ್ಯನಾದ ನಾನು ಎಲ್ಲ ಸಂಘಟನೆಯಲ್ಲಿ ಭಾಗವಹಿಸಿದ ತೃಪ್ತಿ ನನಗಾಗಿದೆ.  ಸರ್ಕಾರದ ಹೊಸ ನೀತಿಗಳನ್ನು ಜಾರಿಗೆ ತರುವಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಜೊತೆ ಕೈ ಜೋಡಿಸುವಂತಾಯಿತು, ವಿವಿಧ ತಾಲೂಕು ಹಾಗೂ ರಾಜ್ಯಮಟ್ಟದಲ್ಲಿ ಕಾರ್ಯಾಗಾರಗಳಲ್ಲಿ ಭಾಗವಹಿಸುವಂತಾಯಿತು. ಮಗುಸ್ನೇಹಿ ಶಾಲೆ, ಮಗುಸ್ನೇಹಿ ಪಂಚಾಯತ್, ಮಗುಸ್ನೆಹಿ ಪೊಲೀಸ್ ಠಾಣೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವ ಅವಕಾಶ ಸಿಕ್ಕಿತು. ಶಿಕ್ಷೆರಹಿತ ಶಿಕ್ಷಣ, ಸಂತಸದಾಯಕ ಕಲಿಕೆ, ಮಕ್ಕಳ ಸಹಾಯವಾಣಿ, ಶಾಲಾ ಆಡಳಿತ ಮತ್ತು ಪರಿಸರ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮ. ಹೀಗೆ ಹತ್ತು ಹಲವು ಸಂಗತಿಗಳಿಂದ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿದೆನು.

ಇವೆಲ್ಲವೂ ಪಡಿವೆಲೊರೆಡ್ ಯೋಜನೆಯ ಕಾರ್ಯಯೋಜನೆಯ ಅಂಗ ಮತ್ತು ತರಬೇತಿಗಳು, ಕಾನೂನುಗಳ ಅನುಷ್ಠಾನವಾಗುವಲ್ಲಿ ಸಮುದಾಯದವರ ಭಾಗವಹಿಸುವಿಕೆಯ ಆಳವನ್ನು ಅರ್ಥೈಸಿಕೊಳ್ಳುವುದು, ಕಾನೂನುಗಳಲ್ಲಿ ಮುಖ್ಯವಾಗಿ ಶಿಕ್ಷಣ ಹಾಗೂ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆ ಈ ಬಗ್ಗೆ ಪೋಕ್ಸೋ, ಬಾಲನ್ಯಾಯ ಕಾಯಿದೆ, ಮಕ್ಕಳು ರಕ್ಷಣಾ ಸಮಿತಿಗಳು, ಗ್ರಾಮ ಪಂಚಾಯತ್ ಮತ್ತು ಶಿಕ್ಷಣ, ಎಸ್‌ಡಿಎಂಸಿ ಮತ್ತು ಶಾಲೆ ಈ ರೀತಿಯಾಗಿ ಕ್ರಮಾನುಬದ್ಧವಾಗಿ ನನಗೆ ತರಬೇತಿ ನೀಡಿ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಯಾಗಿ ಮಾರ್ಪಡಿಸಿರುವ ಪಡಿ ವೆಲೊರೆಡ್ ಯೋಜನೆಗೆ ಉಪಕಾರಗಳನ್ನು ತಿಳಿಸುವವನಾಗಿದ್ದೇನೆ.

*****

# ಪಡಿ ಪ್ರೇರಿತ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ನಾನು



ನಯನ ರೈ

ಶಿಕ್ಷಣವೇ ಜೀವನ ಜೀವನವೇ ಶಿಕ್ಷಣ ಎಂಬ ಮಾತಿನಂತೆ ಶಿಕ್ಷಣ ಸಂಪನ್ಮೂಲ ಕೇಂದ್ರವು ನಮ್ಮ ಜೊತೆ–ಜೊತೆಯಾಗಿ ಬೆಳೆದು ನಿಂತಿದೆ. ನಾನು ನಯನಾ ರೈ ಪುತ್ತೂರು ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಕಳೆದ ವರುಷದಿಂದ ಅದರ ಸದಸ್ಯಳಾಗಿ ಸಮುದಾಯದ ಜನರ ಜೊತೆ ಕೆಲಸ ಮಾಡುತ್ತಾ ಬರುತ್ತಿದ್ದೇನೆ.

ಸಮಾಜ ಸೇವೆ ನನ್ನ ಕನಸು ಆದರೆ ಆ ಕನಸನ್ನು ನನಸು ಮಾಡಲು ನನಗೆ ಜ್ಞಾನದ ಭಂಡಾರವನ್ನು ನೀಡಿರುವುದು ಪಡಿ ವೆಲೊರೆಡ್ ಯೋಜನೆ. ನಾನು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯಳಾಗಿ ಕಾರ್ಯಕಾರಿ ಸಮಿತಿ ಪದಾಧಿಕಾರಿಯಾಗಿ ಎರಡು ಬಾರಿ ಅಧ್ಯಕ್ಷಳಾಗಿ, ಕೋಶಾಧಿಕಾರಿಯಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರವನ್ನು ಮುನ್ನಡೆಸಿರುತ್ತೇನೆ ಎಂಬುದನ್ನು ಹೆಮ್ಮೆಯಿಂದ ತಿಳಿಸಬಯಸುತ್ತೇನೆ.

ಪಡಿ ಸಂಸ್ಥೆಯ ವತಿಯಿಂದ ಹಲವರು ವಿಷಯಗಳಲ್ಲಿ ತರಬೇತಿಯನ್ನು ಪಡೆದುಕೊಂಡು ನಾನು ಸಮುದಾಯ, ಶಾಲೆ, ಪಂಚಾಯತ್‌ಗಳಲ್ಲಿನ ಸಭೆಗಳಲ್ಲಿ ಭಾಗವಹಿಸಿ, ಮಗುಸ್ನೇಹಿ ಸಮಾಜದ ನಿರ್ಮಾಣದಲ್ಲಿ ಜನರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಅಲ್ಲದೆ ಇತರ ಸಂಘಸಂಸ್ಥೆಗಳನ್ನು ಶಿಕ್ಷಣ ಸಂಪನ್ಮೂಲ ಕೇಂದ್ರದ ಜೊತೆ ಸೇರಿಸಿ ವಿಕಲಚೇತನ ಮಕ್ಕಳಿಗೆ ವಿವಿಧ ಸೌಲಭ್ಯಗಳನ್ನು ದೊರಕಿಸಿ ಕೊಟ್ಟಿರುತ್ತೇನೆ.

ಶಿಕ್ಷಣ ಸಂಪನ್ಮೂಲ ಕೇಂದ್ರದ ಬಲ ಅಂದರೆ ಸದಸ್ಯತ್ವ. ಆ ನಿಟ್ಟಿನಲ್ಲಿ ತಾಲೂಕಿನಾದ್ಯಂತ ವಿವಿಧ ಕಾರ್ಯಕ್ರಮಗಳು ಅಂದರೆ ಶಾಲೆ, ಪಂಚಾಯತ್ ತರಬೇತಿಗಳು, ಪರಿಸರ ದಿನಾಚರಣೆ, ಮಕ್ಕಳ ಹಕ್ಕುಗಳ ಮಾಸೋತ್ಸವ, ಶಿಕ್ಷಣ–ಶಿಕ್ಷಕ ಸಪ್ತಾಹ, ವನಮಹೋತ್ಸವ ಮಹಿಳಾ ಕಾರ್ಯಕ್ರಮಗಳ ಮೂಲಕ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯತ್ವನ್ನು ಮಾಡಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಪರಿಚಯವನ್ನು ತಾಲೂಕಿಗೆ ಪಸರಿಸುವಲ್ಲಿ ಶ್ರಮ ವಹಿಸಿರುತ್ತೇನೆ. ಅಲ್ಲದೆ ತಿಂಗಳಿಗೊಂದು ಕಾರ್ಯಕ್ರಮ ಅಭಿಯಾನದ ಮೂಲಕವೂ ಸದಸ್ಯತ್ವವನ್ನು ಹೆಚ್ಚಿಸಲು ಸಂನ್ಮೂಲ ಕೇಂದ್ರದ ಮೂಲಕ ಸಾಧ್ಯವಾಗಿದೆ.

ಶಿಕ್ಷಣ ಸಂಪನ್ಮೂಲ ಕೇಂದ್ರವನ್ನು ಜನರು ಗುರುತಿಸಬೇಕಾದರೆ ಅದು ಬಲವಾಗಿ ನಿಂತು ಸಮುದಾಯದಲ್ಲಿ ಕಂಡು ಬರುವ ಮುಖ್ಯವಾಗಿ ಮಕ್ಕಳಿಗಾಗುವ ತೊಂದರೆಗಳು, ಶಿಕ್ಷಣದಲ್ಲಿರುವ ಕೊರತೆಗಳು, ಒಟ್ಟಾರೆ ಸಮುದಾಯದೊಡನೆ ಸ್ಪಂದಿಸುವ ಪೂರಕ ಯೋಜನೆಗಳು ಇರಬೇಕು. ಇವನ್ನು ಪೂರೈಸಬೇಕಾದರೆ ಸದಸ್ಯತ್ವದಷ್ಟೇ ಆರ್ಥಿಕ ಕ್ರೋಢೀಕರಣವೂ ಅತೀ ಅಗತ್ಯವಾಗಿರುತ್ತದೆ. ಆದುದರಿಂದ ಸದಸ್ಯತ್ವ ಹಾಗೂ ವಿವಿಧ ಕಾರ್ಯಕ್ರಮಗಳ ಮೂಲಕ ಆರ್ಥಿಕ ಕ್ರೋಢೀಕರಣವನ್ನು ಮಾಡಿ ಕೇಂದ್ರವನ್ನು ಆರ್ಥಿಕವಾಗಿ ಮುನ್ನಡೆಸಲಾಗಿದೆ.

ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಕಾರ್ಯಕಾರಿ ಸಮಿತಿಯ ಪದಾಧಿಕಾರಿಯಾಗಿ ಅಧ್ಯಕ್ಷರಾಗಿ, ಕೋಶಾಧಿಕಾರಿಯಾಗಿ ಕೇಂದ್ರದ ಆಡಳಿತ ನಿರ್ವಹಣೆ ಮಾಡಿರುವುದಲ್ಲದೆ ಸಮುದಾಯದ ವಿವಿಧ ಸ್ತರಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಯಲ್ಲಿ ಸಮಾಜವನ್ನು ಜಾಗೃತಗೊಳಿಸುವಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರ ಯಶಸ್ವಿಯಾಗುವಲ್ಲಿ ಕೈ ಜೋಡಿಸಿರುತ್ತೇನೆ. ಅಲ್ಲದೆ ಎಸ್.ಡಿ.ಎಮ್.ಸಿ, ಪಂಚಾಯತ್ ಸದಸ್ಯರು ಸರಕಾರಿ ಇಲಾಖೆಗಳು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸುವಂತೆ ವಕಾಲತು ಮೂಲಕ ಕಾರ್ಯನಿರ್ವಹಿಸಿರುತ್ತೇನೆ. ಶಿಕ್ಷಣ ಸಂಪನ್ಮೂಲ ಕೇಂದ್ರದ ಎಲ್ಲಾ ಸದಸ್ಯರಿಗೆ ವಿವಿಧ ವಿಷಯಗಳಲ್ಲಿ ತರಬೇತಿಗಳನ್ನು ಆಯೋಜಿಸಿ ಎಲ್ಲರೂ ಮಕ್ಕಳ ಗ್ರಾಮ ಸಭೆ, ಶಾಲೆ, ಪಂಚಾಯತ್‌ಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವಂತೆ ಮಾಡಿರುತ್ತೇನೆ. ಅಲ್ಲದೆ ಶಾಲೆ ಬಿಟ್ಟ ಮಕ್ಕಳ ಪ್ರಕರಣವನ್ನು ಕೈಗೊಂಡು ಮಕ್ಕಳು ಮರಳಿ ಶಾಲೆಗೆ ಸೇರುವಲ್ಲಿ ಶ್ರಮಿಸಿರುತ್ತೇನೆ ಹಾಗೂ ಸಮುದಾಯದ ಹಲವಾರು ಸಮಸ್ಯೆಗಳಿರುವ ಮಹಿಳೆಯರು, ಮಕ್ಕಳು, ಹದಿ–ಹರೆಯದ ಮಕ್ಕಳಿಗೆ ಆಪ್ತ ಸಮಾಲೋಚನೆಯನ್ನು ನಡೆಸಿ ಅವರ ಸಮಸ್ಯೆಯನ್ನು ಪರಿಹರಿಸಿರುತ್ತೇನೆ.

ಮೌಲ್ಯಾಧಾರಿತ ಶಿಕ್ಷಣ ಹಾಗೂ ಮಗುಸ್ನೇಹಿ ಸಮಾಜದ ಪರಿಕಲ್ಪನೆಯನ್ನು ಜೊತೆಗೂಡಿಸಿಕೊಂಡು ನಾನು ಸ್ವಂತ ಇಚ್ಛೆಯೊಂದಿಗೆ ಸಮಾಜದ ವಿವಿಧ ಸ್ತರಗಳಲ್ಲಿ ನನ್ನ ಸಮಾಜ ಸೇವೆಯ ಕನಸನ್ನು ಶಿಕ್ಷಣ ಸಂಪನ್ಮೂಲ ಕೇಂದ್ರದ ಮೂಲಕ ಸಾಕಾರಗೊಳಿಸಲು ಸಹಕರಿಸಿದ ಪಡಿ ಸಂಸ್ಥೆಗೆ ನಾನು ಅಭಾರಿಯಾಗಿದ್ದೇನೆ.

*****

# ಪಡಿ, ಶಿಕ್ಷಣ ಸಂಪನ್ಮೂಲ ಕೇಂದ್ರ ಮತ್ತು ನಾನು



**ವತ್ಸಲಾ ನಾಯಕ್**

ನಾನು ವತ್ಸಲಾ ನಾಯಕ್ ಬಿ.ಕಾಂ. ಪದವೀಧರಳಾದ ನಾನು ಪುತ್ತೂರು ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ವರ್ಷಗಳಿಂದ 2006 ರಿಂದ ಸದಸ್ಯೆಯಾಗಿರುತ್ತೇನೆ. ಸಮುದಾಯ ಆಧಾರಿತ ವೇದಿಕೆಯಾದ ಶಿಕ್ಷಣ ಸಂಪನ್ಮೂಲ ಕೇಂದ್ರ ಪಡಿ ಸಂಸ್ಥೆಯ ಮಾರ್ಗದರ್ಶನದೊಂದಿಗೆ ನಡೆಯುತ್ತಿದೆ. ನಾನು ಗೃಹಿಣಿಯಾಗಿ ಮನೆಯಲ್ಲೇ ಇದ್ದವಳನ್ನು ಶಿಕ್ಷಣ ಸಂಪನ್ಮೂಲ ಕೈ ಬೀಸಿ ಕರೆಯಿತು. ಕೇಂದ್ರದ ಸದಸ್ಯಳಾಗಿ ನನ್ನ ಮನಸ್ಸಿನಲ್ಲಿ ಇದ್ದ ಸಮಾಜ ಸೇವೆಯ ಆಸೆ ಚಿಗುರೊಡೆಯುವಂತೆ ಮಾಡಿತು. ಪಡಿ ಸಂಸ್ಥೆಯ ಮಾರ್ಗದರ್ಶನದಲ್ಲಿ ಸಮುದಾಯದಲ್ಲಿ ಮಾಡಬಹುದಾದ ಬದಲಾವಣೆಗಳು ತಳ ಮಟ್ಟದಲ್ಲಿ ಮಹಿಳೆಯರು, ಮಕ್ಕಳ ಮತ್ತು ಹಿಂದುಳಿದ ಕುಟುಂಬಗಳ ಸ್ಥಿತಿ-ಗತಿಗಳ ಅಧ್ಯಯನ ನಡೆಸುವುದನ್ನು ತಿಳಿದುಕೊಂಡೆನು. ಪಡಿ ಸಂಸ್ಥೆಯ ವತಿಯಿಂದ ನಾನು ಲಿಂಗತ್ವ ತರಬೇತಿ, ಮಕ್ಕಳ ಹಕ್ಕುಗಳು, ಶಿಕ್ಷಣ ಹಕ್ಕು ಕಾಯಿದೆ-2009, ಮಾಹಿತಿ ಹಕ್ಕು ಕಾಯಿದೆ-2005, ಎಸ್.ಡಿ.ಎಮ್.ಸಿ, ಮಕ್ಕಳ ರಕ್ಷಣಾ



ಕಾಯಿದೆ, ಬಾಲ ಕಾರ್ಮಿಕ ಕಾಯಿದೆ, ನಾಯಕತ್ವ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ, ಪೋಕ್ಸೋ ಕಾಯಿದೆ, ಮಹಿಳಾ ಮತ್ತು ಮಕ್ಕಳ ಸಾಗಾಟ-ಮಾರಾಟ ನಿಷೇಧ ಕಾಯಿದೆ, ಹದಿ-ಹರೆಯ, ಅಸರ್ ಅಧ್ಯಯನ ಮುಂತಾದ ತರಬೇತಿಗಳನ್ನು ಪಡೆದು ಸಮುದಾಯ, ಶಾಲೆ, ಹಾಗೂ ವಿವಿಧ ಸಂಘ-ಸಂಸ್ಥೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಎಸ್.ಡಿ.ಎಮ್.ಸಿ, ಶಾಲಾ-ಕಾಲೇಜು ಮಕ್ಕಳು, ಮಹಿಳೆಯರು ಮತ್ತು ಶಿಕ್ಷಕರು ಹಾಗೂ ಸ್ವ-ಸಹಾಯ ಸಂಘದ ಸದಸ್ಯರಿಗೆ ನನ್ನಲ್ಲಿರುವ ಮಾಹಿತಿ, ಜ್ಞಾನವನ್ನು ಹಂಚಿ ಅವರಲ್ಲೊಂದಿಷ್ಟು ಬದಲಾವಣೆಯನ್ನು ತಂದಿರುವುದು ನನಗೆ ಹೆಮ್ಮೆಯ ವಿಷಯ.

ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಕಾರ್ಯಕಾರಿ ಸಮಿತಿಯ ಪದಾಧಿಕಾರಿಯಾಗಿ ಅಧ್ಯಕ್ಷರಾಗಿ ಕಾರ್ಯದರ್ಶಿಯಾಗಿ, ಕೋಶಾಧಿಕಾರಿಯಾಗಿ ಕೇಂದ್ರದ ಆಡಳಿತ ನಿರ್ವಹಣೆ ಮಾಡಿರುವುದಲ್ಲದೆ ಸಮುದಾಯದ ವಿವಿಧ ಸ್ತರಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಯಲ್ಲಿ ಸಮಾಜವನ್ನು ಜಾಗೃತಗೊಳಿಸುವಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರ ಯಶಸ್ವಿಯಾಗುವಲ್ಲಿ ಕೈ ಜೋಡಿಸಿರುತ್ತೇನೆ. ಅಲ್ಲದೆ ಎಸ್.ಡಿ.ಎಮ್.ಸಿ, ಪಂಚಾಯತ್ ಸದಸ್ಯರು ಹಾಗೂ ವಿವಿಧ ಜನರನ್ನು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯತ್ವ ಪಡೆಯುವಂತೆ ಮಾಡಿ ಶಿಕ್ಷಣ ಸಂಪನ್ಮೂಲ ಕೇಂದ್ರ ತಾಲೂಕಿನಾದ್ಯಂತ ಸಮುದಾಯಕ್ಕೆ ಪಸರಿಸುವಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ಅಲ್ಲದೆ ಶಾಲೆ ಬಿಟ್ಟ ಮಕ್ಕಳ ಪ್ರಕರಣವನ್ನು ಕೈಗೊಂಡು ಮಕ್ಕಳು ಮರಳಿ ಶಾಲೆಗೆ ಸೇರುವಲ್ಲಿ ಶ್ರಮಿಸಿರುತ್ತೇನೆ ಹಾಗೂ ಸಮುದಾಯದ ಹಲವಾರು ಸಮಸ್ಯೆಗಳಿರುವ ಮಹಿಳೆಯರು, ಮಕ್ಕಳು, ಹದಿ–ಹರೆಯದ ಮಕ್ಕಳಿಗೆ ಆಪ್ತ ಸಮಾಲೋಚನೆಯನ್ನು ನಡೆಸಿ ಅವರ ಸಮಸ್ಯೆಯನ್ನು ಪರಿಹರಿಸಿರುತ್ತೇನೆ.



ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯಳಾಗಿ ನಾನು ಪ್ಯಾರಾ ಲೀಗಲ್ ವಾಲೆಂಟಿಯರ್, ವಿವಿಧ ಸಂಘ ಸಂಸ್ಥೆಗಳಲ್ಲಿ ಮಾರ್ಗದರ್ಶಕಳಾಗಿ, ಎಸ್.ಡಿ.ಎಮ್.ಸಿ ಸಮಿತಿಯಲ್ಲಿ ನಾಮ ನಿರ್ದೇಶಿತ ಸದಸ್ಯಳಾಗಿ ಗುರುತಿಸಿಕೊಂಡಿರುತ್ತೇನೆ. ನಾನೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಗ್ರಾಮ, ತಾಲೂಕು, ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಪಡಿ ಸಂಸ್ಥೆಯ ತರಬೇತಿ ಹಾಗೂ ಮಾರ್ಗದರ್ಶನವೇ ಕಾರಣ ಎಂಬುದನ್ನು ನಾನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತೇನೆ. ಸಮುದಾಯ ಸಮಾಜ, ಶಾಲೆ, ಪಂಚಾಯಾತ್‌ಗಳಲ್ಲಿ ಮಗುಸ್ನೇಹಿ ವಾತಾವರಣ ನಿರ್ಮಿಸಲು ಪಡಿಯ ತರಬೇತಿ ನನಗೆ ದಾರಿದೀಪವಾಗಿದೆ. ಇದರ ಮೂಲಕ ನನ್ನ ಜ್ಞಾನವನ್ನು ನಾನು ಒರೆಗೆ ಹಚ್ಚಲು ಸಹಕರಿಸಿದ ಪಡಿಗೆ ನನ್ನ ನಮನಗಳು.

# ಇಲಾಖಾಧಿಕಾರಿಗಳು ಮತ್ತು ಜನಪ್ರತಿನಿಧಿಗಳೊಂದಿಗೆ ಮಕ್ಕಳ ಮುಖಾಮುಖಿ ಸಂವಾದ

ಪಡಿ ಮಂಗಳೂರು ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರ ಹಾಗೂ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ದಿನಾಂಕ **30–10–2019** ನಡೆದ ಇಲಾಖಾ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳೊಂದಿಗೆ ಮಕ್ಕಳ ಮುಖಾಮುಖಿ ಸಂವಾದ ಕಾರ್ಯಕ್ರಮ ತಾಲೂಕು ಪಂಚಾಯತ್‌ನಲ್ಲಿ ನಡೆಯಿತು. ಉದ್ಘಾಟನೆಯನ್ನು ತಾಲೂಕು ಪಂಚಾಯತ್ ಅಧ್ಯಕ್ಷರಾದ ಚನಿಯ ಕಲ್ತಡ್ಕ ವಹಿಸಿದರು. ವಾಸ್ತವಿಕ ಕಸ್ತೂರಿ ಬೊಳುವಾರು ಮಾತನಾಡಿ ಮುಂದೆ ಮಕ್ಕಳೊಂದಿಗೆ ಪ್ರಶ್ನಾವಳಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಕಾರ್ಯ ನಿರ್ವಾಹಣಾಧಿಕಾರಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳು ವಕೀಲರ ಸಂಘದ ಅಧ್ಯಕ್ಷರು, ಪೋಲಿಸ್ ಠಾಣಾಧಿಕಾರಿಗಳು, ಅರಣ್ಯ ಅಧಿಕಾರಿಗಳು, ಆರೋಗ್ಯ ಇಲಾಖೆ, ಮಕ್ಕಳ ಸಹಾಯವಾಣಿ ಇಲಾಖೆ, ಮಕ್ಕಳ ರಕ್ಷಣಾ ಘಟಕ, ಸ್ಥಾಯಿ ಸಮಿತಿ ಅಧ್ಯಕ್ಷರು ಬಸ್ಸು ಡಿಪೊ ವ್ಯವಸ್ಥಾಪಕರು, ಸಮಾಜ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಭಾಗವಹಿಸಿದ್ದರು.

**ಮುಂದೆ ಕೆಳಗಿನಂತೆ ಇಲಾಖಾಧಿಕಾರಿಗಳು ಮಕ್ಕಳ ಪ್ರಶ್ನೆಗಳನ್ನು ಆಲಿಸಿ ಪ್ರತಿಕ್ರಿಯಿಸಿದರು**

**1.** *ಪೋಲಿಸ್ ಠಾಣಾ ವತಿಯಿಂದ ಮಕ್ಕಳಿಗೆ ಏನು ಏನು ಕಾರ್ಯಕ್ರಮ ಇದೆ. ಮತ್ತು ಪೋಲಿಸ್ ಇಲಾಖೆಯವರು 3 ತಿಂಗಳಿಗೊಮ್ಮೆ ಪ್ರತಿ ಶಾಲೆಗಳಲ್ಲಿ ಮಕ್ಕಳ ರಕ್ಷಣೆ ಬಗ್ಗೆ ಧೈರ್ಯ ತುಂಬುವಂತೆ ಮಾಹಿತಿ ನೀಡಬಹುದೆ? (ಆಲೆಟ್ಟಿ ಶಾಲೆಯಿಂದ)*

**ಉತ್ತರ:** ಈ ಕೆಲಸವನ್ನು ಖಂಡಿತವಾಗಿಯೂ ಮುಂದಿನ ದಿನಗಳಲ್ಲಿ ಎಲ್ಲ ಶಾಲೆಗಳಲ್ಲಿ ಹಮ್ಮಿಕೊಳ್ಳುತ್ತೇವೆ ಎಂದು ಇಲಾಖೆಯವರು ತಿಳಿಸಿದರು.

**2.** *ಮಕ್ಕಳಿಗೆ ನ್ಯಾಯಾಲಯದಲ್ಲಿ ಕೋರ್ಟ್ ಕಲಾಪಗಳನ್ನು ವೀಕ್ಷಿಸಲು ಅವಕಾಶ ಇದೆಯೇ? (ಕೊಲ್ಚಾರ್ ಶಾಲೆಯಿಂದ)*

**ಉತ್ತರ:** ಅವಕಾಶ ಇದೆ. ಶಿಕ್ಷಕರು ವಾರದ ಮೊದಲೆ ಇಲಾಖೆಗೆ ಪತ್ರವನ್ನು ನೀಡಿದಲ್ಲಿ ಮಕ್ಕಳಿಗೆ ಅವಕಾಶವನ್ನು ಕಲ್ಪಿಸಲಾಗುವುದು.

**3.** *ಸರಕಾರಿ ಸಾರಿಗೆ ಬಸ್ಸಿನಲ್ಲಿ ಮಕ್ಕಳ ಪಾಸ್‌ನ್ನು ನೋಡಿಯು ಅದರಲ್ಲಿ ನಮೋದಿಸಿರುವ ಜಾಗದಲ್ಲಿ ಇಳಿಸದೆ ಬೇರೆ ಜಾಗದಲ್ಲಿ ಇಳಿಸುತ್ತಾರೆ ಇದಕ್ಕೆ ಏನು ಕ್ರಮ ಕೈಗೊಳ್ಳುತ್ತಿರಾ? (ಕೊಲ್ಚಾರ್)*

**ಉತ್ತರ:** ಇದನ್ನು ಮುಂದಿನ ದಿನಗಳಲ್ಲಿ ಇಲಾಖೆ ಸರಿಪಡಿಸುವಲ್ಲಿ ಜವಾಬ್ದಾರಿ ತೆಗೆದುಕೊಳ್ಳುತ್ತದೆ.

4. *ಈ ಶೈಕ್ಷಣಿಕ ವರ್ಷದಲ್ಲಿ ಕ್ರೀಡಾ ಸಾಮಾಗ್ರಿಯನ್ನು ಖರೀದಿಸಲು ಇಲಾಖೆದಿಂದ ಒಂದು ಸಾವಿರ ರೂಪಾಯಿ ಇದು ಸಾಕಾಗುವುದಿಲ್ಲ ಇದಕ್ಕೆ ಪಂಚಾಯತ್ ಏನಾದರೂ ಸಹಕಾರ ನೀಡಬಹುದೇ? (ಎಲ್ಲಾ ಶಾಲೆ)*

**ಉತ್ತರ:** ಪಂಚಾಯತ್ ಸಹಕಾರ ನೀಡುವಂತೆ ತಾಲೂಕು ಪಂಚಾಯತ್ ಅಧಿಕಾರಿಯವರು ತಿಳಿಸಿರುತ್ತಾರೆ.

5. *ಮಕ್ಕಳ ರಕ್ಷಣಾ ಸಮಿತಿ ಶಾಲೆಯಲ್ಲಿ ಇದೆ. ಆ ಸಮಿತಿಯಲ್ಲಿ ಪೋಲಿಸ್ ಇರುತ್ತಾರೆ. ಅವರು ಪ್ರತಿ 3 ತಿಂಗಳಿಗೊಮ್ಮೆ ನಡೆಯುವ ಸಭೆಗೆ ಹಾಜರಾಗಿ ಮಕ್ಕಳಿಗೆ ಸುರಕ್ಷತೆ ಬಗ್ಗೆ ಮಾಹಿತಿ ನೀಡಬಹುದೆ? (ಎಲ್ಲಾ ಶಾಲೆ)*

**ಉತ್ತರ:** ಮಾಹಿತಿ ನೀಡುತ್ತೇವೆ. ಶಾಲೆಯ ರಕ್ಷಣಾ ಸಮಿತಿ ಸಭೆಗೆ ಶಿಕ್ಷಕರು ನಮಗೆ ತಿಳಿಸುವಂತಾಗಬೇಕು.

6. *ತಾಲೂಕಿನಲ್ಲಿ ಮಕ್ಕಳ ಸಹಾಯವಾಣಿ ಆಫೀಸ್ ಯಾಕಿಲ್ಲ? (ಕೊಲ್ಚಾರ್ ಶಾಲೆ)*

**ಉತ್ತರ:** ಪುತ್ತೂರು ಮತ್ತು ಬೆಳ್ತಂಗಡಿಯಲ್ಲಿ ಈಗಾಗಲೇ ಆಫೀಸ್ ತೆರೆಯಲಿರುವುದು. ಮುಂದಿನ ದಿನದಲ್ಲಿ ಸುಳ್ಯದ ಬಗ್ಗೆ ಯೋಚಿಸುತ್ತೇವೆ.

7. *6 ರಿಂದ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಸಿಗಬಹುದೆ? (ಇಡ್ಯಡ್ಕ ಶಾಲೆ)*

**ಉತ್ತರ:** ಈ ವಿಷಯ ಸರಕಾರದಲ್ಲಿ ಚರ್ಚೆ ನಡೆಯುತ್ತಾ ಇದೆ. ಆಗಬಹುದು.

8. *6 ರಿಂದ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ಚಿಕಿತ್ಸೆ ನೀಡುವರೇ? (ಉಬರಡ್ಕ ಮಿತ್ತೂರು ಶಾಲೆ)*

**ಉತ್ತರ:** ಇದನ್ನು ಖಂಡಿತ ನೀಡುತ್ತೇವೆ.

9. *ಸರಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಹಿರಿಯ ನಾಗರಿಕರಿಗೆ ವಿಧಾನ ಸಭಾ ಸದಸ್ಯರಿಗೆ ಮೀಸಲು ಸೀಟು ಇರುವಂತೆ ಮಕ್ಕಳಿಗೆ ಯಾಕೆ ಇರಬಾರದು? (ಅಮ್ಮೆಮಾಡಿಯಾರ್ ಶಾಲೆ)*

**ಉತ್ತರ:** ಇದರ ಬಗ್ಗೆ ನಾವು ಇಲಾಖೆಯಲ್ಲಿ ಚರ್ಚಿಸುತ್ತೇವೆ.

10. ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗುವ ಎಲ್ಲಾ ವಾಹನಗಳ ಮೇಲು ಶಾಲಾವಾಹನ ಎಂದು ಫಲಕಗಳನ್ನು ಅಳವಡಿಸಬಾರದೇಕೆ? (ಉಬರಡ್ಕ ಮಿತ್ತೂರು ಶಾಲೆ)

11. ಪ್ರತಿ ಮನೆಯಲ್ಲಿ ವಿದ್ಯುತ್ ಸರಿಯಾಗಿರಬೇಕು (ರಾತ್ರಿ) ಮಕ್ಕಳಿಗೆ ಓದು–ಬರೆಯಲು ಪರೀಕ್ಷೆ ಸಮಯದಲ್ಲಿ ತುಂಬಾ ತೊಂದರೆಯಾಗುತ್ತದೆ? (ಕೊಲ್ಚಾರ್ ಶಾಲೆ)

12. ಪ್ರತಿ ಶಾಲೆಯಲ್ಲೂ ಶಿಕ್ಷಕರ ವರ್ಗಾವಣೆ ಶಾಲಾ ಆರಂಭದಲ್ಲಿಯೇ ಆಗಬೇಕು ಮತ್ತು ಬದಲಿ ಶಿಕ್ಷಕರು ಆರಂಭದಲ್ಲಿಯೇ ಬರಬೇಕು ಮಧ್ಯೆ ಮಧ್ಯೆ ಹೋಗಿ ಬರುವುದು ಮಕ್ಕಳ ಕಲಿಕೆ ದೃಷ್ಟಿಯಿಂದ ತುಂಬಾ ತೊಂದರೆಯಾಗುತ್ತದೆ? (ಇಡ್ಯಡ್ಕ ಶಾಲೆ)

13. ಎಲ್ಲಾ ಸರಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಬೇಕೇ ಬೇಕು ಕೊಡಿಸಬಹುದೇ? (ಅಮ್ಮೆಮಾಡಿಯಾರ್ ಶಾಲೆ)

14. ಪ್ರತಿ ಶಾಲೆಗಳಲ್ಲಿಯೂ ದೈಹಿಕ ಶಿಕ್ಷಕರು ಬೇಕು ಮತ್ತು ತರಗತಿವಾರು ಹಾಗೂ ವಿಷಯವಾರು ಶಿಕ್ಷಕರನ್ನು ನೀಡಬಹುದೆ? (ಎಲ್ಲಾ ಶಾಲೆ)

15. ಶಾಲಾ ಸಮಯದಲ್ಲಿ ಶಿಕ್ಷಕರಿಗೆ ತರಬೇತಿಯನ್ನು ನೀಡವುದಾಗಲಿ ಅನ್ಯ ಇಲಾಖೆಗಳ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತಾಗಬಾರದು ಸಾಧ್ಯವೇ? (ಉಬರಡ್ಕ ಮಿತ್ತೂರು ಶಾಲೆ)

16. ಸರಕಾರಿ ಶಾಲೆಯು ಎಲ್ಲಾ ಮಕ್ಕಳಿಗೂ ಪೌಷ್ಠಿಕ ಆಹಾರ ದೊರಕುವಂತಾಗಬೇಕು? (ಮೊಟ್ಟೆ,ಹಣ್ಣು) (ಅಲೆಟ್ಟಿ ಶಾಲೆ)

17. ಬಸ್ಸುಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಕುಡಿಯುವ ನೀರು Fire Controlನ್ನು ಸರಕಾರಿ ಹಾಗೂ ಖಾಸಗಿ ಬಸ್ಸುಗಳಲ್ಲಿ ಅಳವಡಿಸಬಹುದೇ? ಸಾರಿಗೆ ಇಲಾಖೆ ಕ್ರಮ ಕೈಗೊಳ್ಳಬಹುದೇ? (ಆಲೆಟ್ಟಿ ಶಾಲೆ)

18. ಸಾರಿಗೆ ಅದಾಲತ್‌ಗೆ ಮಕ್ಕಳು ಪ್ರತಿನಿಧಿಸುವಲ್ಲಿ ಏನಾದರೂ ಕ್ರಮ ಕೈಗೊಳ್ಳಬಹುದೇ? ಅಲ್ಲಿ ಮಕ್ಕಳ ಸಮಸ್ಯೆಗೆ ಯಾರು ಸ್ಪಂದನೆ ನೀಡುತ್ತಾರೆ? (ಆಲೆಟ್ಟಿ ಶಾಲೆ)

19. ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ದಂಡನೆ ನಿಷೇಧದ ಬಗ್ಗೆ ಮಾಹಿತಿ ನೀಡಬಹುದೇ? ದೈಹಿಕ ದಂಡನೆ ಅಥವಾ ಬೇರೆ ಯಾವುದೇ ರೀತಿಯಲ್ಲಿ ದೌರ್ಜನ್ಯಕ್ಕೆ ಒಳಗಾದರೆ ಮಕ್ಕಳು ಎಲ್ಲಿ ಎಲ್ಲಿ ಹೇಳಬಹುದು? (ಕೊಲ್ಚಾರ್ ಶಾಲೆ)

20. *ಮಕ್ಕಳಿಲ್ಲ ಎಂಬ ಕಾರಣಕ್ಕೆ ಶಾಲೆಯನ್ನು ಮುಚ್ಚುವ ಬದಲಿಗೆ ಗ್ರಾಮಕ್ಕೊಂದು ಮಾದರಿ ಶಾಲೆಯನ್ನಾಗಿ ಮಾಡಿ ಈ ಶಾಲೆಗೆ ಬರುವ ಮಕ್ಕಳಿಗೆ ಉಚಿತ ವಾಹನದ ವ್ಯವಸ್ಥೆಯನ್ನು ಮಾಡಬಹುದಲ್ಲವೆ? (ಉಬರಡ್ಕ ಮಿತ್ತೂರು ಶಾಲೆ)*

21. *ಮಕ್ಕಳಿಗೆ ಸಂಬಂಧಪಟ್ಟ ಸಲಹಾ ಪೆಟ್ಟಿಗೆಗಳನ್ನು ಬಸ್ಸು ನಿಲ್ದಾಣಗಳಲ್ಲಿಯೂ ಅಳವಡಿಸಬಹುದೇ? (ಆಲೆಟ್ಟಿ ಶಾಲೆ)*

22. *ಶಾಲಾ ಆವರಣಗೋಡೆ ಪಕ್ಕದಲ್ಲಿ ವಿದ್ಯುತ್ ತಂತಿಗಳು ಹಾದು ಹೋಗುತ್ತಿರುತ್ತವೆ. ಇದಕ್ಕೆ ವಿದ್ಯುತ್ ಇಲಾಖೆ ಅಂತಹ ಜಾಗಗಳನ್ನು ನೋಡಿ ಕ್ರಮ ಕೈಗೊಳ್ಳಬೇಕು? (ಆಲೆಟ್ಟಿ ಶಾಲೆ)*

23. *ಶಾಲಾ ಮಕ್ಕಳಿಗೆ ಶಾಲಾ ಆರಂಭದಲ್ಲಿಯೇ 2 ಜೊತೆ ಸಮವಸ್ತ್ರಗಳನ್ನು ಒದಗಿಸಿ. ಒಂದೇ ಸಮವಸ್ತ್ರ ಕೊಟ್ಟರೆ ತುಂಬಾ ತೊಂದರೆಯಾಗುತ್ತ ದಿನಾ ತೊಳೆದು ಹಾಕುವ ಪರಿಸ್ಥಿತಿ ಬರುತ್ತದೆ. ಏನೂ ಮಾಡುವಿರಿ?*

24. *ಮಕ್ಕಳಿಗೆ ದಿನ ಊಟದಲ್ಲಿ ಪೌಷ್ಠಿಕ ಆಹಾರವನ್ನು ಒದಗಿಸುವಿರೆ?*

25. *ಮಕ್ಕಳಿಗೆ ಸಮವಸ್ತ್ರ ಇದ್ದಂತೆ ಶಿಕ್ಷಕರು ಏಕೆ ಸಮವಸ್ತ್ರ ಮತ್ತು ಗುರುತಿನ ಚೀಟಿ ಧರಿಸಬಾರದು?*

26. *ಶಾಲಾ ಪಕ್ಕದಲ್ಲಿರುವ ಅಂಗಡಿಗಳಲ್ಲಿ ಮಕ್ಕಳು ದುಷ್ಚಟಕ್ಕೆ ಬಲಿಯಾಗುವಂತೆ ಯಾವುದೇ ವಸ್ತುಗಳನ್ನು ಮಾರಾಟ ಮಾಡದಂತೆ ತಡೆಹಿಡಿಯಬಹುದೇ?*

27. *ಶಾಲೆಯಲ್ಲಿ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಸಿ.ಸಿ. ಕ್ಯಾಮಾರವನ್ನು ಅಳವಡಿಸಬಹುದೇ? (ಎಲ್ಲಾ ಶಾಲೆ)*

28. *ಬಿಸಿಊಟಕ್ಕೆ ಕುಳಿತುಕೊಳ್ಳಲು ಕಟ್ಟಡದ ವ್ಯವಸ್ಥೆಯನ್ನು ಒದಗಿಸಬಹುದೇ? (ಎಲ್ಲಾ ಶಾಲೆ)*

29. *ಶಾಲೆಯಲ್ಲಿ ಕಿಡಿಗೇಡಿಗಳು ಆವರಣವನ್ನು ಹಾರಿ ಬಂದು ಶಾಲಾ ಆವರಣದ ಒಳಗೆ ಪಾನಮತ್ತ ವಸ್ತುಗಳನ್ನು ತಿಂದು ಕುಡಿದು ಶಾಲಾ ಆವರಣದಲ್ಲಿಯೇ ಹಾಕಿ ಹೋಗುತ್ತಾರೆ. ಇದಕ್ಕೆ ಏನು ಕ್ರಮ ಕೈಗೊಳ್ಳುವಿರಿ? (ಜಟ್ಟಿಪಳ್ಳ ಶಾಲೆ)*

30. *ಮಕ್ಕಳ ಸುರಕ್ಷತೆ ದೃಷ್ಠಿಯಿಂದ ನಮ್ಮ ಶಾಲೆಗೆ ಆವರಣಗೋಡೆ ಒದಗಿಸಿಕೊಡುವಿರಾ? (ಇಡ್ಯಡ್ಕ ಶಾಲೆ)*

**31.** *3 ತಿಂಗಳಿಗೊಮ್ಮ ಪ್ರತಿ ಶಾಲೆಯಲ್ಲಿಯೂ ಆರೋಗ್ಯ ಇಲಾಖೆಯವರು ಬಂದು ಹದಿಹರೆಯದ ಎಲ್ಲಾ ಗಂಡು–ಹೆಣ್ಣು ಮಕ್ಕಳಿಗೆ ಮಾಹಿತಿಯನ್ನು ನೀಡಬಹುದೇ?*

**32.** *ಎಲ್ಲಾ ಶಾಲೆಗಳಲ್ಲಿಯೂ ಕಂಪ್ಯೂಟರ್‌ನ್ನು ಒದಗಿಸುವುದರೊಂದಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಬೇಕು?*

**33.** *ಪ್ರತಿಭಾಕಾರಂಜಿಯಲ್ಲಿ ಭಾಗವಹಿಸುವ ಎಲ್ಲಾ ಮಕ್ಕಳಿಗೂ ವಾಹನ ಭತ್ಯೆಯನ್ನು ನೀಡಬೇಕು? (ಎಲ್ಲಾ ಶಾಲೆ)*

ಇದರಿಂದ ಜಟ್ಟಿಪಳ್ಳ ಶಾಲೆಯ ಪಕ್ಕದಲ್ಲಿ ನಗರ ಪಂಚಾಯತ್ ನೀರಿನ ಟ್ಯಾಂಕ್ ಸೋರುತ್ತಿದ್ದು ಅದು ಶಾಲಾ ಆವರಣಕ್ಕೆ ಬರುತ್ತಿತ್ತು ಮತ್ತು ಟ್ಯಾಂಕ್ ಅಪಾಯದ ಸ್ಥಿತಿ ನಿಂತಿತ್ತು. ಈ ವಿಷಯವಾಗಿ ಅಲ್ಲಿಯಲ್ಲಿ ವಿದ್ಯಾರ್ಥಿ ಪ್ರಶ್ನೆಯನ್ನು ಕೇಳಿದನು. ಅದಕ್ಕೆ ಸರಿಯಾಗಿ ನಗರ ಪಂಚಾಯತ್ ಸದಸ್ಯರಾದ ವೆಂಕಪ್ಪ ಗೌಡರು ಸ್ಪಂದಿಸಿ ಮರುದಿನವೇ ಡಿ.ಸಿ.ಯವರನ್ನು ಕರೆಸಿ ನಗರ ಪಂಚಾಯತ್ ಅಧ್ಯಕ್ಷರು ಹಾಗೂ ಅಧಿಕಾರಿಗಳನ್ನು ಕರೆದು ಟ್ಯಾಂಕ್‌ನ್ನು ಬದಲಾಯಿಸಿ ಸರಿಯಾದ ಜಾಗದಲ್ಲಿ ಇರಿಸುವಂತೆ ಡಿ.ಸಿ.ಯವರು ಕ್ರಮ ಕೈಗೊಂಡರು.

*****

## 2017 ರಿಂದ 2020 ಅವಧಿಯಲ್ಲಿ ಪಡಿ ಸಂಸ್ಥೆಯ ಮೂಲಕ ಹಮ್ಮಿಕೊಂಡ ಯೋಜನೆಯ ಒಳಹುಗಳು



**ರೆನ್ನಿ ಡಿಸೋಜ**
**ನಿರ್ದೇಶಕರು**
**ಪಡಿ, ಮಂಗಳೂರು**

ಪಡಿ ಸಂಸ್ಥೆಯ ವೆಲೊರೆಡ್ ಯೋಜನೆಯೊಂದಿಗೆ ಕಳೆದೆರಡು ದಶಕಗಳೊಂದಿಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ಸಹಕಾರದೊಂದಿಗೆ ಶ್ರಮಿಸಿದ ವೆಲೊರೆಡ್ ತಂಡ, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸದಸ್ಯರು, ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು, ಜನಪ್ರತಿನಿಧಿಗಳು, ಇಲಾಖಾಧಿಕಾರಿಗಳು ಹಾಗೂ ಬಹಳ ಮುಖ್ಯವಾಗಿ ಮಕ್ಕಳ ನಿರಂತರ ಒಡನಾಟದಿಂದ ಮಗುಸ್ನೇಹಿ ಸಮಾಜಕ್ಕೆ ಪೂರಕವಾಗಿರುವ ವ್ಯವಸ್ಥೆಗಳು ಚಿಗುರುತ್ತಿವೆ. ಈ ಸಂಧರ್ಭದಲ್ಲಿ ನಾವು ಕಂಡ ಕೆಲವೊಂದು ಫಲಿತಾಂಶಗಳನ್ನು ಇಲ್ಲಿ ದಾಖಲಿಸುವ ಸಂದರ್ಭದಲ್ಲಿ, ಇನ್ನೂ ಸಾಧಿಸಬೇಕಾದ ಕೆಲವೊಂದು ಅಂಶಗಳನ್ನು ಗುರುತಿಸಿ ಚರ್ಚಿಸಬೇಕೆಂದಿದ್ದೇವೆ. ಯಾಕೆಂದರೆ ಮಗುಸ್ನೇಹಿ ವ್ಯವಸ್ಥೆ ಚಿಗುರುವುದು ಒಂದು ಪ್ರಕ್ರಿಯೆ ಅಥವಾ ಇದೊಂದು ನಿರಂತರ ಚಿಂತನೆ ಹಾಗೂ ಇಡೀ ಸಮುದಾಯ ಮಗುಸ್ನೇಹಿ ಸಮಾಜದ ಪರಿಕಲ್ಪನೆ. ಈ ಚಿಂತನೆಯನ್ನು ಸಮುದಾಯವಾಗಿ ಪ್ರತಿಯೊಬ್ಬ ನಾಗರಿಕನೂ ತೊಡಗಿಸಿಕೊಳ್ಳುವ ಪ್ರಯತ್ನದಲ್ಲಿ ಕಳೆದ ಯೋಜನಾವಧಿ (2017–2020)ಯಲ್ಲಿ 52 ಸರಕಾರಿ ಶಾಲೆಗಳಲ್ಲಿ ಮಗುಸ್ನೇಹಿ ಶಾಲಾ ಪ್ರಕ್ರಿಯೆ ಮತ್ತು RTE ಕಾಯಿದೆಯ 5ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಿದ ಗುಣಮಟ್ಟದ ಶಿಕ್ಷಣ ಮತ್ತು ಮಗುಸ್ನೇಹಿ ಪರಿಕಲ್ಪನೆಯನ್ನು ಪ್ರಾಯೋಗಿಕವಾಗಿ ಅರ್ಥಮಾಡಲು ಸಾಧ್ಯವಾಯಿತು. ಮಾತ್ರವಲ್ಲದೆ ಒಂದು ಶಾಲೆ ಎಷ್ಟರಮಟ್ಟಿಗೆ ಮಗುಸ್ನೇಹಿಯಾಗಿದೆ ಎಂದು ಅಳೆಯಲು ತಯಾರಿಸಲಾದ ಸೂಚ್ಯಂಕಗಳ ಮೂಲಕ ಶಾಲೆಯ ಪ್ರಗತಿಯನ್ನು ಶಾಲೆಯ ಆಡಳಿತ ವ್ಯವಸ್ಥೆಯು ಕಾಲಕಾಲಕ್ಕೆ ಅರ್ಥಮಾಡಿಕೊಡಲು ಸಾಧ್ಯವಾಗಿದೆ.

ಯೋಜನಾವಧಿಯಲ್ಲಿ 52 ಶಾಲೆಗಳಲ್ಲಿ ಬಳಸಿದ ಈ ಸೂಚ್ಯಂಕಗಳು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಬಳಸಲು ಮಾರ್ಗದರ್ಶಕವಾಗಿದೆ. ಎಂಬುದು ನಮ್ಮ ಅನಿಸಿಕೆ. ಹಾಗೂ RTE ಕಾಯಿದೆ ಅನುಷ್ಠಾನದಲ್ಲಿ ತಮ್ಮ ತಮ್ಮ ಶಾಲೆಗಳು ಶಾಲಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವ ಮಟ್ಟದಲ್ಲಿ ಇದೆ ಹಾಗೂ ಇದಕ್ಕೆ ಪೂರಕವಾಗಿ ಶಾಲಾ

ಮಟ್ಟದಲ್ಲಿ ಮಾಡಬೇಕಾದ ಅಂಶಗಳನ್ನು ಪಟ್ಟಿ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಈ ಯೋಜನಾವಧಿಯಲ್ಲಿ ತಯಾರಿಸಿದ ಸೂಚ್ಯಂಕಪಟ್ಟಿಯನ್ನು ಎಲ್ಲಾ ಶಾಲೆಗಳಲ್ಲಿ ಅಳವಡಿಸುವ ನಿಟ್ಟಿನಲ್ಲಿ ಇಲಾಖೆಗಳೊಡನೆ ವಿಚಾರ ವಿನಿಮಯ ಮಾಡುವ ಅವಶ್ಯಕತೆ ಇದೆ. ಹಾಗೂ ಯೋಜನೆಯ ಅವಧಿಯಲ್ಲಿ ಅಂತಿಮಗೊಳಿಸಲ್ಪಟ್ಟ ಸೂಚ್ಯಂಕಗಳು ಬಳಕೆಗೆ ಲಭ್ಯವಿದ್ದು ಆಸಕ್ತಿ ಇರುವ ಶಾಲೆಗಳಲ್ಲಿ ಸ್ವಇಚ್ಛೆಯಿಂದ ಬಳಸಬಹುದಾಗಿದೆ.

ಎರಡು ವರ್ಷಗಳ ಅವಧಿಯ 4 ಹಂತಗಳ ಶಾಲಾಮಟ್ಟದ ಎಸ್‌ಡಿಎಂಸಿ ಸದಸ್ಯರನ್ನು ತರಬೇತುಗೊಳಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ತಯಾರಿಸಿದ 'ಸತ್ವ' ತರಬೇತಿ ಕೈಪಿಡಿ ಸಾಹಿತ್ಯವು ರಾಜ್ಯದಲ್ಲಿ ನಡೆದ ಪ್ರಥಮ ಪ್ರಯತ್ನವಾಗಿದ್ದು, ಇಲಾಖೆಗಳ ಮೂಲಕ ಈ ಶಾಲೆಯಲ್ಲಿ ಎಸ್‌ಡಿಎಂಸಿಗಳನ್ನು ಸಶಕ್ತಗೊಳಿಸಲು 'ಸತ್ವ' ತರಬೇತಿ ಕೈಪಿಡಿ ಸಾಹಿತ್ಯವು ಅನುಕೂಲವಾಗಲಿದೆ.

ಅದಲ್ಲದೆ ಉಭಯ ಜಿಲ್ಲೆಗಳಲ್ಲಿ ಮಕ್ಕಳ ರಂಗತಂಡ ರಚನೆ ಮತ್ತು ನಾಟಕ ಪ್ರದರ್ಶನ ಪ್ರಕ್ರಿಯೆ ಶಿಕ್ಷಣ ರಂಗದಲ್ಲೆ ಹೊಸ ಸಂಚಲನ ಮೂಡಿಸಿತು. ಸ್ಥಳಿಯ ಪರಿಣತ ರಂಗ ನಿರ್ದೇಶಕರ ಸಹಕಾರದಲ್ಲಿ ಶಾಲೆ, ಸಮುದಾಯ ಹಾಗೂ ಮಕ್ಕಳು ತೊಡಗಿರುವ ಪ್ರಕ್ರಿಯೆ ಸಮುದಾಯಕ್ಕೆ ಶಿಕ್ಷಣದ ಕುರಿತು ಮಕ್ಕಳೇ ಜಾಗೃತಿ ಮೂಡಿಸಿದ್ದು ಬಹಳ ಪರಿಣಾಮಕಾರಿಯಾಗಿದ್ದು, ತಾಲೂಕು ಮಟ್ಟದಲ್ಲಿ ಮಕ್ಕಳ ರಂಗತಂಡಗಳಿಗೆ ವೇದಿಕೆ ಸ್ಥಾಪಿಸಿ ಶಿಕ್ಷಣವನ್ನು ನಿಟ್ಟಿನಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ಮತ್ತು ಶಿಕ್ಷಣದ ಪ್ರಾಧಿಕಾರಗಳು ಮಕ್ಕಳಿಗೆ ವೇದಿಕೆಗಳನ್ನು ಮಕ್ಕಳನ್ನು ಪ್ರೋತ್ಸಾಹಿಸಬೇಕು.

ಯೋಜನಾವಧಿಯಲ್ಲಿ ಕಂಡುಕೊಂಡ ಅಂಶದಂತೆ ಮಗುಸ್ನೇಹಿ ಗ್ರಾಮಪಂಚಾಯತ್‌ನ ಅನುಷ್ಠಾನಕ್ಕಾಗಿ ನಡೆಸಿದ ವಿವಿಧ ಚಟುವಟಿಕೆಗಳ ಸಂಧರ್ಭದಲ್ಲಿ ಗಮನಿಸಿದಂತೆ ಮಕ್ಕಳ ಹಕ್ಕುಗಳ ಗ್ರಾಮಸಭೆ ಇನ್ನಷ್ಟು ಆಳ ಹಾಗೂ ವಿಸ್ತಾರವಾಗಿ ಹಮ್ಮಿಕೊಳ್ಳುವ ಅವಶ್ಯಕತೆ ಇದೆ. ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು ಒಂದು ದಿವಸಕ್ಕೆ ಸೀಮಿತಗೊಳ್ಳದೆ, ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆರಂಭ ಮಾಡುವ ಮುನ್ನ ವಾರ್ಡ್ ಮಟ್ಟದಲ್ಲಿ ಚರ್ಚೆ ಅಭಿಯಾನ ನಡೆದು, ಮಗುಸ್ನೇಹಿ ಪಂಚಾಯತ್ ಅನುಗುಣವಾಗಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳ ಸಮಸ್ಯೆಗಳಿಗೆ ಪಂಚಾಯತ್ ಗಮನ ಕೊಡುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಮಗುಸ್ನೇಹಿ ಶಾಲಾ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಹಾಗೂ ಪ್ರತಿಯೊಂದು ಮಗು ಶಾಲೆಯಲ್ಲಿ ಉಳಿಯುವ ನಿಟ್ಟಿನಲ್ಲಿ, ಸರಕಾರ ಮಟ್ಟದಲ್ಲಿ ಕಾರ್ಯೋನ್ಮುಖರಾಗುವ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದೆ.

ಮಗುಸ್ನೇಹಿ ಪಂಚಾಯತ್ ಪರಿಕಲ್ಪನೆಯಲ್ಲಿ ಕೆಲಸ ಮಾಡುತ್ತಾ ಸ್ಥಳೀಯ ಮಟ್ಟದಲ್ಲಿ ಮಕ್ಕಳ ರಕ್ಷಣೆಯ ಕುರಿತು ಮಕ್ಕಳ ರಕ್ಷಣಾ ಸಮಿತಿಗಳ ಅವಶ್ಯಕತೆ ಇದ್ದು ಮಕ್ಕಳ ರಕ್ಷಣೆಯ ಕುರಿತು ಇರುವ ಬೇರೆಬೇರೆ ಸಮಿತಿಗಳ ಬದಲು ಪಂಚಾಯತ್ ಮಟ್ಟದಲ್ಲಿ ಮಕ್ಕಳ ಸಮಗ್ರ ರಕ್ಷಣೆಗಾಗಿ ಒಂದೇ ಸಮಿತಿಯನ್ನು ಪುನರ್‌ರಚಿಸಿ ಸರಕಾರ ಚಿಂತನೆ ನಡೆಸಬೇಕಾಗಿದೆ. ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಿಸಿದ ಅನುಭವದ ಹಿನ್ನೆಲೆಯಲ್ಲಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಮಾಡಲೇಬೇಕಾದ ಸುದಾರಣಾ ಅಂಶಗಳನ್ನು ಈ ಕೆಳಕಂಡಂತೆ ದಾಖಲಿರಿಸಿರುತ್ತೇವೆ ಮತ್ತು ಅನುಸರಣಾ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ಸರಕಾರದ ಇಲಾಖಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿರುತ್ತೇವೆ.

- ಮಗುಸ್ನೇಹಿ ಶಾಲೆ ಯೋಜನೆಯ ಅವಧಿಯಲ್ಲಿ ಶಾಲಾಮಟ್ಟದ ನಾಯಕತ್ವ ಬೆಳೆಸುವ ನಿಟ್ಟಿನಲ್ಲಿ ಶಾಲಾ ಮಟ್ಟದಲ್ಲಿ ಎಸ್‌ಡಿಎಂಸಿಯನ್ನು ಸಶಕ್ತೀಕರಣಗೊಳಿಸುವ ಕಾರ್ಯಕ್ರಮವು ರಾಜ್ಯಾದ್ಯಂತ ಎಲ್ಲಾ ಶಾಲೆಗಳಿಗೆ ನಡೆಯಬೇಕಾಗಿದೆ.
- ಶಿಕ್ಷಣ ಹಕ್ಕು ಕಾಯಿದೆ ಹಾಗೂ ನಿಯಮಗಳನ್ನು ಅನುಸರಿಸುವ ಪ್ರಕ್ರಿಯೆಯಲ್ಲಿ ಎಸ್‌ಡಿಎಂಸಿಯನ್ನು ಶಾಲಾ ಹಂತದಲ್ಲಿ ಸದೃಢಗೊಳಿಸುವ ನೆಲೆಯಲ್ಲಿ ತರಬೇತಿ ಮಾರ್ಗದರ್ಶಿಯನ್ನು ಹೊರತಂದು ಅನುಷ್ಠಾನಿಸುವಂತೆ ಪ್ರೇರೇಪಿಸುವ ಅವಶ್ಯಕತೆ ಇದೆ.
- ಯೋಜನಾವಧಿಯಲ್ಲಿ ಕಂಡುಕೊಂಡ ಕಲಿಕೆ, ತರಬೇತಿ, ಸಾಹಿತ್ಯಗಳು ಹಾಗೂ ಶಾಲೆಯಲ್ಲಿ ಪಡೆದ ಫಲಿತಾಂಶಗಳು ನಿಜವಾಗಿಯೂ ಮುಂದಿನ ದಿನಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನವಾಗಿ ಮಗುಸ್ನೇಹಿ ಶಾಲಾ ವಾತಾವರಣಕ್ಕೆ ಶಕ್ತಿ ತುಂಬಬೇಕಾಗಿದೆ.
- ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಕಲಿಕೆಯನ್ನು ಸುಧಾರಿಸುವುದು ಮಾತ್ರವಲ್ಲ, ಮಕ್ಕಳ ರಕ್ಷಣೆ ವಿಧಾನಗಳು ಸದೃಢಗೊಳಿಸಬಹುದಾಗಿದೆ.

- ತಳಮಟ್ಟದಲ್ಲಿ ಮಕ್ಕಳ ರಕ್ಷಣೆ ಪ್ರಕ್ರಿಯೆಯಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಇತರ ಮಕ್ಕಳ ರಕ್ಷಣಾ ಇಲಾಖೆಗಳನ್ನು ತೊಡಗಿಸುವ ನಿಟ್ಟಿನಲ್ಲಿ ಸರಕಾರ ವಿಶೇಷ ಗಮನ ಹರಿಸಬೇಕಾಗಿದೆ.

- ಎಲ್ಲಾ ಶಾಲೆಗಳಲ್ಲಿ ರಚಿಸಲಾದ ಶಾಲಾ ಮಕ್ಕಳ ರಕ್ಷಣಾ ನೀತಿ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನವಾಗಬೇಕು. ಮತ್ತು ಎಲ್ಲಾ ಶಾಲೆಗಳಿಗೆ ಮಕ್ಕಳ ರಕ್ಷಣಾ ನೀತಿಯ ರಚನೆ ಮತ್ತು ಅನುಷ್ಠಾನ ಕಡ್ಡಾಯಗೊಳಿಸಬೇಕಾಗಿದೆ.

- ಮಗುಸ್ನೇಹಿ ಪಂಚಾಯತ್‌ಗೆ ಸಂಬಂಧಪಟ್ಟು ಪ್ರಗತಿಯನ್ನು ಅಳೆಯುವ ಸಾಧನಗಳು (tools) ಈಗಾಗಲೇ ಸಂಶೋಧಿಸಲಾಗಿದ್ದು, ಇದು ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ತಲುಪುವ ನಿಟ್ಟಿನಲ್ಲಿ ಸ್ಥಳೀಯ ಸರಕಾರಗಳ ಜನಪ್ರತಿನಿಧಿಗಳಿಗೆ ತರಬೇತಿ ನಡೆಸಬೇಕಾಗಿದೆ. ಹಾಗೂ ಪಂಚಾಯತ್ ಅಭಿವೃದ್ಧಿಯ ಸೂಚ್ಯಂಕದಲ್ಲಿ ಈ ಸಾಧನವನ್ನು ಬಳಸಬಹುದಾಗಿದೆ.

- ಈ ಮೂರು ವರ್ಷಗಳ ಯೋಜನಾವಧಿಯಲ್ಲಿ ಗಮನಿಸಿದಂತೆ ಶಾಲಾ ಹಂತದಲ್ಲಿಯೇ ಎಸ್‌ಡಿಎಂಸಿ ತರಬೇತಿಯು ನಡೆದು ಶಾಲಾ ಅಭಿವೃದ್ಧಿ ಯೋಜನೆಯ ಅನುಷ್ಠಾನ ಮೇಲ್ವಿಚಾರಣೆಯ ಪ್ರಕ್ರಿಯೆಯು ನಡೆದು, ಈ ಮೇಲ್ವಿಚಾರಣೆಗೆ ಸಂಬಂಧಪಟ್ಟಂತೆ ಕ್ಲಸ್ಟರ್ ಮಟ್ಟದಲ್ಲಿ ಕ್ಲಸ್ಟರ್ ಹಂತದ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಸಮೂಹ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪ್ರಗತಿ ಪರಿಶೀಲನೆಗಳು ನಡೆಯಬೇಕಾಗಿದೆ.

- ಇದೇ ಮಾದರಿಯು ಗ್ರಾಮೀಣ ಪ್ರದೇಶದಲ್ಲಿರುವಂತೆ ನಗರಪ್ರದೇಶದ ಶಾಲೆಗಳು ಹಾಗೂ ಸ್ಥಳೀಯ ಆಡಳಿತಗಳಿಗೂ ಅನ್ವಯಿಸಿ ಮಗುಸ್ನೇಹಿ ನಗರದ ಕುರಿತು ಕೆಲಸಗಳು ತುರ್ತಾಗಿ ಆರಂಭವಾಗಬೇಕಾಗಿದೆ.

ಈ ಒಂದು ಪ್ರಕ್ರಿಯೆಯಲ್ಲಿ ವಿಶಿಷ್ಟ ಅನುಭವ ಹಾಗೂ ಸಂಶೋಧನಾತ್ಮಕ ಚಿಂತನೆಗಳನ್ನು ಮಾಡುವ ನಿಟ್ಟಿನಲ್ಲಿ ಪಡಿ ಯೋಜನೆಯಲ್ಲಿ ಒಳಗೊಂಡಂತಹ ಸರ್ವರಿಗೂ ನನ್ನ ಹೃದಯಾಂತರಾಳದ ವಂದನೆಗಳನ್ನು ತಿಳಿಸುತ್ತ ಮುಂದಿನ ಯೋಜನೆಯ ಅನುಷ್ಠಾನದಲ್ಲೂ ತಮ್ಮ ಸಹಕಾರ ಮತ್ತು ಸಹಭಾಗಿತ್ವವನ್ನು ನಿರೀಕ್ಷಿಸುತ್ತೇವೆ.